58	SUKKA FABRICS.	DAEHNUR	Dilawar Athani	Fabrics
59	POOJA TAMMANNA BHANDARI	POOJA TAMMANNA BHANDARI AT VALIYAVAR ONI DOMBARAKOPPA POST KITTUR TQ KITTUR DIST BELAGAVI	POOJA TAMMANNA BHANDARI	Textile
60	KAVYA JYOTIBA BHANDARI	KAVYA JYOTIBA BHANDARI AT NEKAR ONI DOMBARAKOPPA POST KITTUR TQ KITTUR DIST BELAGAVI	KAVYA JYOTIBA BHANDARI	Textile
61	VIDYASHREE RAMACHANDRA BHANADARI	VIDYASHREE RAMACHANDRA BHANADARI AT NEKAR ONI DOMBARAKOPPA POST KITTUR TQ KITTUR DIST BELAGAVI	VIDYASHREE BHANDARI	Textile

ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ, ಮಾನ್ಯ ವಿಧಾನಸಭಾ ಸದಸ್ಯರು, ಕಿತ್ತೂರು ವಿಧಾನಸಭಾ ಕ್ಷೇತ್ರ ಇವರ ಪ್ರಶ್ನೆ ಸಂ.326 ಕ್ಕೆ ಅನುಬಂಧ-1

#	EnterpriseName	Address	OwnerName	Activity
62	ANUGRAHA ENTERPRISES	SHANTI NIVAS WARD NO. 23 BLOCK NO. 23/513 1ST CROSS VIDYANAGAR, BELGAUM ROAD BAILHONGAL, BELGAUM 591102.	DANESHWARI NACHIKETU BILLUR	Others
63	POWERLOOM	H NO 38 (A), NEKAR ONI, DOMBARAKOPPA KITTUR, BELAGAVI	Shrinivas Basappa Bhandari	Powerloom
64	DEEPA GARMENTS	98 GHANDI NAGAR AT POST M K HUBLI	DEEPA SHIVAJATAYYA GANGADHARMAT H	Garments
65	AARADHYA TEXTILE	H NO 12/B, NEKAR ONI DOMBARKOPPA, KITTUR BELAGAVI.	Ramachandra Bhandari	Textile
66	JYOTIBA BHANDARI	H.NO. 12/B, NEKAR ONI, DOMBARAKOPPA, KITTUR, BELAGAVI	JYOTIBA BHANDARI	Textile
67	SHAJADABI MOHAMMEDALI DHABBU	720 DESHNUR DESHNUR DESHNUR 591147 DESHNUR	sHAJADABI mOHAMMEDALI dHABBU	Others
68	BIBIJAN MULLA	#,NEGINAHAL, BAILHONGAL TALUK,BELAGAVI	Bibijan Mulla	Others
69	IMRAN MUJAWAR	231 DESHNUR . DESHNUR 591147 BELAGAVI DESHNUR	Imran Mujawar	Others
70	KRISHNA GURUNATH UPARI	SOMAWAR PETH NEKAR NAGAR KITTUR BELAGAVI	Krishna	Textile
71	SHRI BASAVESHWAR TEXTILES	S/O CHANDRAPPA,SUTAGATTI	SADEPPA RAMKI	Textile
72	OM COMPUTER CENTER	RACHAYYA S NANJAYYANAVAR	Rachayya Nanjayyanavar	DTP Works
73	HAIR CANTING	TIGADI B.O	YALLAPPA GANGAPPA HADAPAD	Hari Cutting
74	AARADHYA PHOTO STUDIO AND ZEROX	S/O SHIVARAYAPPA RACHANNAVAR,AT/POST: SUTAGATTI,TALUK:BAILHONGAL,DIST:BELAGAVI	Ashok Rachannavar	Zerox
75	MANJUNATH BADIGER	H. NO. 1746, SANGOLLI ONI, M. K. HUBLI, SAMPGAON, DIST. BELAGAVI	MANJUNATH BADIGER	Carpenter
76	S K ENTERPRISES	S K ENTERPRISES INCHAL ROAD, OPP OM SHANTHI BUILDING BAILHONGAL	Shashikant Shivappa Kambar	Others

ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ, ಮಾನ್ಯ ವಿಧಾನಸಭಾ ಸದಸ್ಯರು, ಕಿತ್ತೂರು ವಿಧಾನಸಭಾ ಕ್ಷೇತ್ರ ಇವರ ಪ್ರಶ್ನೆ ಸಂ.326 ಕ್ಕೆ ಅನುಬಂಧ-1

#	EnterpriseName	Address	OwnerName	Activity
77	CARPENTER	TIGADI B.O	IRAPPA MAHARUDRAPPA BADIGER	Carpenter
78	CARPENTER	TIGADI	maharudrappa badiger	Carpenter
79	MALLAPPA KAMATAGI	AT/POST/DESHANUR TQ/BAILHONGAL DIST/BELAGAVI	MALLAPPA KAMATAGI	Otherws
80	GULSHANBI DHABU	AT/POST/DESHANUR	GULSHANBI DHABU	Others
81	MOHAMMED RAFIQ SHABUDDIN NINBARAGI	AT/POST/DESHANUR MOMIN GALLI DESHANUR	MOHAMMED RAPIQ SHABUDDIN NINBARAGI	Others
82	MOHAMMEDGOUS SULEBHAVI	AT/POST/DESHANUR MOMIN GALLI DESHANUR	MOHAMMEDGOUS SULEBHAVI	Others
83	ASHOK HALIJOL	AT/POST/DESHANUR TQ/BAILHONGAL DIST/BEAGAVI	ASHOK HALIJOL	Others
84	SIDDESHWAR GARMENTS	# MAIN ROAD BASAV NAGAR HANNIKERI BAILHONGAL BELAGAVI 591102	Bharati Uddannavar	Garments
85	SHREE TECH SOLUTIONS	GURUWARPETH BALAGAR ONI KALAMAT ROAD KITTUR TQ KITTUR DIST BELAGAVI KARNATAKA 591115	YESUP RUDRAPPA CHIKKANNAVAR	DTP Works
86	SHRI MALLIKARJUN COMMUNICATION	SHRI MALLIKARJUN COMMUNICATION, CHIKKANAGOUDAR COMPLEX NESARGI	MALLIKARJUN KALLAPPA MURAKIBHAVI	DTP Works
87	VINAYAK ENTERPRISES	BASAVARAJ DODAMANI ATPOST GURUWAR PETH VIDYA GIRI KITTUR TQ KITTUR DIST BELAGAVI	BASAVARAJ DODAMANI	Others
88	MOHAMMED GOUS DABBU	52 CORPORATION AREA CORPORATION AREA DESHNUR 591147 DESHNUR	MOhammed Gous Dabbu	Others
89	LAXMI TRADERS BAILUR	PUNDALIK TORAGAL AT POST BAILUR TQ CH KITTUR DIST BELAGAVI	Pundalik Shivaji Torgal	Tailoring
90	AISHWARYA ENTERPRISES	MASOTI STREET GOVANAKOPPA TQ BAILHONGAL DIST BELGAUM STATE KARNATAKA POSTAL CODE 591104	AKSHAR ANIKIVI	Others

ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ, ಮಾನ್ಯ ವಿಧಾನಸಭಾ ಸದಸ್ಯರು, ಕಿತ್ತೂರು ವಿಧಾನಸಭಾ ಕ್ಷೇತ್ರ ಇವರ ಪ್ರಶ್ನೆ ಸಂ.326 ಕ್ಕೆ ಅನುಬಂಧ-1

#	EnterpriseName	Address	OwnerName	Activity
91	SAMPIGE BOOK STALL AND MOBILE SERVICE ACCESSORIES	HNO 1319, BOGAR ONI, M K HUBLI, BELAGAVI	SHIDRAMAYYA BASAYYA SOLABAINAVAR	Mobile Repairs
92	SURENDRA HAIR CUTTING SALOON	SURENDRA MADIWALEPPA HADIMANI AT DEMATTI POST UGARKHOD TQ KITTUR DIST BELAGAVI	SURENDRA MADIWALEPPA HADIMANI	Hari Cutting
93	CHANNANGI ASSOCIATES	CHOUKIMATH CROOS GURUWAR PETH KITTUR	CHINNAPPA CHANNANGI	Others
94	FOOTWARE SHOP	NOORANI GALLI KITTUR, BELGAUM	MAHAMMAD IKBAL SHAIKH	Foot Wear
95	ATTAR BRICKS	RIYAZAHMAD R ATTAR ATPOST SOMAWAR JAMIYA MASIDI GALLI CH KITTUR TQ KITTUR DIST BELAGAVI	RIYAZAHMAD R ATTAR	Bricks

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	365
2	ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪ ಬಸಪ್ಪ
3	ಉತ್ತರಿಸಬೇಕಾದ ದಿನಾಂಕ	:	08.12.2020
4	ಉತ್ತರಿಸುವವರು	:	ಸಣ್ಣ ನೀರಾವರಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಯಲಬುರ್ಗಾ ಜಿಲ್ಲೆಯಲ್ಲಿರುವ ಒಟ್ಟು ಸಣ್ಣ ನೀರಾವರಿ ಇಲಾಖೆಯ ಹಾಗೂ ಕಂದಾಯ ಕೆರೆಗಳ ಸಂಖ್ಯೆ ಎಷ್ಟು;	ಕೊಪ್ಪಳ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 122 ಕೆರೆಗಳಿರುತ್ತವೆ. ಕೆರೆಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಕಂದಾಯ ಕೆರೆಗಳ ಮಾಹಿತಿಯು ಲಭ್ಯವಿರುವುದಿಲ್ಲ.
ಆ)	ಇವುಗಳಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು;	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ಕೈಗೊಳ್ಳಲಾದ ಕೊಪ್ಪಳ ಏತ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ 12 ಕೆರೆಗಳಿರುತ್ತವೆ.
ಇ)	ಸದರಿ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳೇನು;	ಸದರಿ ಕೆರೆಗಳಲ್ಲಿ, ಬಳೂಟಗಿ ಕೆರೆ, ವಟಪರ್ವಿ ಕೆರೆ, ಬೆಣಕಲ್ ಕೆರೆ, ಮುರಡಿ ಕೆರೆ ಮತ್ತು ಮಲಕಸಮುದ್ರ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಈ)	ಕಳೆದ ಎರಡು ವರ್ಷಗಳಲ್ಲಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿನ ಕೆರೆಗಳ, ಚೆಕ್ ಡ್ಯಾಮ್‌ಗಳ ಅಭಿವೃದ್ಧಿಗಾಗಿ ವಿನಿಯೋಗಿಸಿದ ಅನುದಾನವೆಷ್ಟು;	ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಲ್ಲಿ ರೂ.1239.00ಲಕ್ಷ ಅಂದಾಜು ಮೊತ್ತದಲ್ಲಿ 12 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇದುವರೆಗೆ ರೂ.100.00ಲಕ್ಷ ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.
ಉ)	ಮಳೆಯಾಶ್ರಿತ ಪ್ರದೇಶವಾಗಿರುವ ಯಲಬುರ್ಗಾ ಕ್ಷೇತ್ರದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ರೂಪಿಸಿಕೊಂಡ ಯೋಜನೆಗಳ ವಿವರಗಳನ್ನು ನೀಡುವುದು?	ಅಂತರ್ಜಲ ಮಟ್ಟ ಹೆಚ್ಚಿಸುವ ಸಲುವಾಗಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾಗುವ ಜಿನುಗು ಕೆರೆಗಳ ಮತ್ತು ಚೆಕ್‌ಡ್ಯಾಂಗಳ ನಿರ್ಮಾಣದಿಂದ ಅಂತರ್ಜಲ ಮಟ್ಟ ಹೆಚ್ಚಳವಾಗುವುದು. ವಿವಿಧ ಲೆಕ್ಕಶೀರ್ಷಿಕೆಗಳಡಿ ಒದಗಿಸಲಾಗಿರುವ ಅನುದಾನದಲ್ಲಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ರೂ.750.00ಲಕ್ಷ ಅಂದಾಜು ಮೊತ್ತದ 10 ಚೆಕ್‌ಡ್ಯಾಂ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಗಳಿಗೆ ಇದುವರೆಗೆ ರೂ.236.44ಲಕ್ಷ ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಬಂಧ-4ರಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: MID 218 LAQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಶ್ರೀ ಆಚಾರ್ ಹಾಲಪ್ಪ ಬಸಪ್ಪ ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:365 (ಅ) ಮತ್ತು (ಆ)ಕ್ಕೆ ಅನುಬಂಧ-1 (365)

ಕೊಪ್ಪಳ ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಕೆರೆಗಳ ವಿವರ

ಕ್ರ.ಸಂ.	ತಾಲ್ಲೂಕು	ಕೆರೆಯ ಹೆಸರು	ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)	ಕೊಪ್ಪಳ ಏತ ನೀರಾವರಿ ಯೋಜನೆ ವ್ಯಾಪ್ತಿಗೆ ಒಳಪಟ್ಟಿದೆಯೇ
1	2	3	4	5
1	ಕೊಪ್ಪಳ	ಗಿಣಿಗೇರಾ ಕೆರೆ	84	
2	ಕೊಪ್ಪಳ	ಕೆರೆಹಳ್ಳಿ ಕೆರೆ	103	
3	ಕೊಪ್ಪಳ	ಕಲ್‌ತಾವರಗೇರಾ ಕೆರೆ	101	
4	ಕೊಪ್ಪಳ	ಹೊಸುರ ಕೆರೆ	73	
5	ಕೊಪ್ಪಳ	ಹಿರೇಕಾಸನಕಂಡಿ ಕೆರೆ	49	
6	ಕೊಪ್ಪಳ	ಬುಡಶೆಟ್ನಾಳ ಕೆರೆ	852	
7	ಕೊಪ್ಪಳ	ಅಬ್ಬಿಗೇರಾ ಕೆರೆ	235	
8	ಕೊಪ್ಪಳ	ಇಂದರಗಿ ಕೆರೆ	170	
9	ಕೊಪ್ಪಳ	ಕಾಮನೂರ ಕೆರೆ	50	
10	ಕೊಪ್ಪಳ	ಘಟರೆಡ್ಡಿಹಾಳ ಕೆರೆ	66	
11	ಕೊಪ್ಪಳ	ಗಬ್ಬೂರು ಕೆರೆ	155	
12	ಕೊಪ್ಪಳ	ವಣಬಳ್ಳಾರಿ ಜಿನುಗುಕೆರೆ	41	
13	ಕೊಪ್ಪಳ	ಕೂಕನಪಳ್ಳಿ ಜಿನುಗುಕೆರೆ	42	
14	ಕೊಪ್ಪಳ	ಚಳ್ಳಾರಿ ಜಿನುಗುಕೆರೆ	44	
15	ಕೊಪ್ಪಳ	ಹಾಳಹೊಸಳ್ಳಿ ಜಿನುಗುಕೆರೆ	50	
16	ಕೊಪ್ಪಳ	ಹಣವಾಳ ಜಿನುಗುಕೆರೆ	40	
17	ಕೊಪ್ಪಳ	ಹಿರೇಬೊಮ್ಮನಾಳ ಜಿನುಗುಕೆರೆ	72	
18	ಕೊಪ್ಪಳ	ಚಿಕ್ಕಬೊಮ್ಮನಾಳ ಜಿನುಗುಕೆರೆ	61	
19	ಕೊಪ್ಪಳ	ಬೂದಗುಂಪಾ ಜಿನುಗುಕೆರೆ	40	
20	ಕೊಪ್ಪಳ	ದನಗಲದೊಡ್ಡಿ ಜಿನುಗುಕೆರೆ	55	
21	ಕೊಪ್ಪಳ	ಇಂದಿರಾನಗರ ಜಿನುಗುಕೆರೆ	55	
22	ಕೊಪ್ಪಳ	ಜಬ್ಬಲಗುಡ್ಡ ಜಿನುಗುಕೆರೆ	43	
23	ಕೊಪ್ಪಳ	ಹುಲ್ಲೇಶ್ವರ ಜಿನುಗುಕೆರೆ	40	
24	ಕೊಪ್ಪಳ	ಇರಕಲ್‌ಗಡ ಜಿನುಗುಕೆರೆ	40	
25	ಕೊಪ್ಪಳ	ಹಂದ್ರಾಳ ಜಿನುಗುಕೆರೆ	40	
26	ಗಂಗಾವತಿ	ರಾಮಪುರ ಕೆರೆ	111	
27	ಗಂಗಾವತಿ	ರಾಮದುರ್ಗ ಕೆರೆ	45	
28	ಗಂಗಾವತಿ	ಲಾಯದಹುನಸಿ ಕೆರೆ	162	
29	ಗಂಗಾವತಿ	ಬಸರಿಹಾಳ ಕೆರೆ	162	
30	ಗಂಗಾವತಿ	ಕಾಟಾಪುರ ಕೆರೆ	971	
31	ಗಂಗಾವತಿ	ಕರಡೋಣ ಕೆರೆ	329	
32	ಗಂಗಾವತಿ	ಕನಕಗಿರಿ ಕೆರೆ	576	
33	ಗಂಗಾವತಿ	ಇಂಗಳದಾಳ ಕೆರೆ	212	
34	ಗಂಗಾವತಿ	ದೇವಲಾಪುರ ಕೆರೆ	328	
35	ಗಂಗಾವತಿ	ವಿಠಲಾಪುರ ಕೆರೆ	140	
36	ಗಂಗಾವತಿ	ರಾಯಕೆರೆ	200	
37	ಗಂಗಾವತಿ	ಹುಲಿಹೈದರ ಜಿನುಗುಕೆರೆ	40	
38	ಗಂಗಾವತಿ	ಬಿದರಕೊಳ್ಳ ಜಿನುಗುಕೆರೆ	40	
39	ಗಂಗಾವತಿ	ಜೀರಾಳ ಜಿನುಗುಕೆರೆ	45	
40	ಗಂಗಾವತಿ	ನೀರ್ಕೊಳ್ಳಿ ಜಿನುಗುಕೆರೆ	40	
41	ಗಂಗಾವತಿ	ಬೆನ್ನೂರು ಜಿನುಗುಕೆರೆ	40	
42	ಗಂಗಾವತಿ	ಗೌರಿಪುರ ಜಿನುಗುಕೆರೆ	50	
43	ಗಂಗಾವತಿ	ಹಂಪಸದುರ್ಗ ಜಿನುಗುಕೆರೆ	60	
44	ಗಂಗಾವತಿ	ಭಟ್ಟರನರಸಾಪುರ ಜಿನುಗುಕೆರೆ	75	

ಕ್ರ.ಸಂ.	ತಾಲ್ಲೂಕು	ಕೆರೆಯ ಹೆಸರು	ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)	ಕೊಪ್ಪಳ ಏತ ನೀರಾವರಿ ಯೋಜನೆ ವ್ಯಾಪ್ತಿಗೆ ಒಳಪಟ್ಟಿದೆಯೇ
1	2	3	4	5
45	ಗಂಗಾವತಿ	ಗಡ್ಡಿ ಜಿನುಗುಕೆರೆ	73	
46	ಗಂಗಾವತಿ	ಬೊಮ್ಮಸಾಗರ ಜಿನುಗುಕೆರೆ	81	
47	ಗಂಗಾವತಿ	ಮಲ್ಲಾಪುರ ಜಿನುಗುಕೆರೆ	51	
48	ಗಂಗಾವತಿ	ಕಲಕೇರಿ ಜಿನುಗುಕೆರೆ	73	
49	ಗಂಗಾವತಿ	ಆಗೋಲಿ ಜಿನುಗುಕೆರೆ	45	
50	ಗಂಗಾವತಿ	ವೆಂಕಟಗಿರಿ ಜಿನುಗುಕೆರೆ	45	
51	ಗಂಗಾವತಿ	ಚಿಕ್ಕಮಾದಿನಾಳ ಜಿನುಗುಕೆರೆ	69	
52	ಗಂಗಾವತಿ	ಮಲಕನಮರಡಿ ಜಿನುಗುಕೆರೆ	53	
53	ಗಂಗಾವತಿ	ಯಡಹಳ್ಳಿ ಜಿನುಗುಕೆರೆ	42	
54	ಗಂಗಾವತಿ	ಮಲ್ಲಿಗೆವಾಡ ಜಿನುಗುಕೆರೆ	40	
55	ಗಂಗಾವತಿ	ಚಿರ್ಚನಗುಡ್ಡ ಜಿನುಗುಕೆರೆ	40	
56	ಗಂಗಾವತಿ	ಗುಡದೂರ ಜಿನುಗುಕೆರೆ	75	
57	ಗಂಗಾವತಿ	ನಾಗೇಶನಹಳ್ಳಿ ಜಿನುಗುಕೆರೆ	40	
58	ಗಂಗಾವತಿ	ರಾಮನಕೆರೆ ಜಿನುಗುಕೆರೆ	45	
59	ಗಂಗಾವತಿ	ಹುಲಸನಹಟ್ಟಿ ಜಿನುಗುಕೆರೆ	53	
60	ಗಂಗಾವತಿ	ಹೆಚ್.ಆರ್.ಜಿ.ನಗರ ಜಿನುಗು ಕೆರೆ	40	
61	ಗಂಗಾವತಿ	ವೆಂಕಟಾಪುರ ಜಿನುಗುಕೆರೆ	40	
62	ಗಂಗಾವತಿ	ಪರಾಪುರ ಜಿನುಗುಕೆರೆ	50	
63	ಗಂಗಾವತಿ	ಗಂಗನಾಳ ಜಿನುಗುಕೆರೆ	40	
64	ಗಂಗಾವತಿ	ಆಕಳಕುಂಪಿ ಜಿನುಗುಕೆರೆ	40	
65	ಗಂಗಾವತಿ	ಮುಸಲಾಪುರ ಜಿನುಗುಕೆರೆ	40	
66	ಯಲಬುರ್ಗಾ	ಬಳೂಟಗಿ ಕೆರೆ	109	ಹೌದು
67	ಯಲಬುರ್ಗಾ	ತಲ್ಲೂರ ಕೆರೆ	191	ಹೌದು
68	ಯಲಬುರ್ಗಾ	ವಟಪರ್ವಿ ಕೆರೆ	148	ಹೌದು
69	ಯಲಬುರ್ಗಾ	ನಿಲೋಗಲ್ ಕೆರೆ	144	ಹೌದು
70	ಯಲಬುರ್ಗಾ	ಜೇಣಕಲ್ ಕೆರೆ	123	ಹೌದು
71	ಯಲಬುರ್ಗಾ	ಕಲಭಾವಿ ಕೆರೆ	73	ಹೌದು
72	ಯಲಬುರ್ಗಾ	ಮುರಡಿ ಕೆರೆ	203	ಹೌದು
73	ಯಲಬುರ್ಗಾ	ಮಲಕಸಮುದ್ರ ಕೆರೆ	680	ಹೌದು
74	ಯಲಬುರ್ಗಾ	ಹುಣಸಿಹಾಳ ಜಿನುಗುಕೆರೆ	40	ಹೌದು
75	ಯಲಬುರ್ಗಾ	ರಾಜೂರ ಜಿನುಗುಕೆರೆ	40	
76	ಯಲಬುರ್ಗಾ	ದ್ಯಾಮಣಕಿ ಜಿನುಗುಕೆರೆ	45	
77	ಯಲಬುರ್ಗಾ	ಚಿಕ್ಕಮ್ಯಾಗೇರಿ ಜಿನುಗುಕೆರೆ	61	
78	ಯಲಬುರ್ಗಾ	ಗಾಣದಾಳ ಜಿನುಗುಕೆರೆ	41	ಹೌದು
79	ಯಲಬುರ್ಗಾ	ಹೊಸೂರ ಜಿನುಗುಕೆರೆ	52	ಹೌದು
80	ಯಲಬುರ್ಗಾ	ಕಟಗಿಹಳ್ಳಿ ಜಿನುಗುಕೆರೆ	43	
81	ಯಲಬುರ್ಗಾ	ದ್ಯಾಂಪೂರ ಜಿನುಗುಕೆರೆ	40	ಹೌದು
82	ಕುಷ್ಟಗಿ	ಬೀಳಗಿ ಕೆರೆ	45	
83	ಕುಷ್ಟಗಿ	ಕಲಾಲಬಂಡಿ ಕೆರೆ	73	
84	ಕುಷ್ಟಗಿ	ಕಬ್ಬರಗಿ ಕೆರೆ	47	
85	ಕುಷ್ಟಗಿ	ಹೊಸಳ್ಳಿ ಕೆರೆ	97	
86	ಕುಷ್ಟಗಿ	ಮಿಯಾಪುರ ಕೆರೆ	109	
87	ಕುಷ್ಟಗಿ	ಹನುಮಗೇರಾ ಕೆರೆ	61	
88	ಕುಷ್ಟಗಿ	ಹನುಮಸಾಗರ ಕೆರೆ	294	
89	ಕುಷ್ಟಗಿ	ಬಾದಮನಾಳ ಕೆರೆ	100	
90	ಕುಷ್ಟಗಿ	ಜಾಗೀರಗುಡದೂರ ಕೆರೆ	97	

ಕ್ರಸಂ.	ತಾಲ್ಲೂಕು	ಕೆರೆಯ ಹೆಸರು	ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)	ಕೊಪ್ಪಳ ಏತ ನೀರಾವರಿ ಯೋಜನೆ ವ್ಯಾಪ್ತಿಗೆ ಒಳಪಟ್ಟಿದೆಯೇ
1	2	3	4	5
91	ಕುಷ್ಟಗಿ	ವಿರುಪಾಪುರ ಕೆರೆ	48	
92	ಕುಷ್ಟಗಿ	ಹಿರೇನಂದಿಹಾಳ ಕೆರೆ	83	
93	ಕುಷ್ಟಗಿ	ಮುದ್ದಲಗುಂದಿ ಕೆರೆ	61	
94	ಕುಷ್ಟಗಿ	ಮೆಣೇದಾಳ ಕೆರೆ	62	
95	ಕುಷ್ಟಗಿ	ನಾರಿನಾಳ ಕೆರೆ	85	
96	ಕುಷ್ಟಗಿ	ಜುಮಲಾಪುರ ಕೆರೆ	87	
97	ಕುಷ್ಟಗಿ	ಮೆಣಸಗೇರಾ ಕೆರೆ	65	
98	ಕುಷ್ಟಗಿ	ಅಪ್ಪರ್‌ಹಿರೇನಾಲಾ ಕೆರೆ	1850	
99	ಕುಷ್ಟಗಿ	ರಾಯನಕೆರೆ	48	
100	ಕುಷ್ಟಗಿ	ವಿಠಲಾಪುರ ಕೆರೆ	47	
101	ಕುಷ್ಟಗಿ	ನಿಡಶೇಷಿ ಕೆರೆ	860	
102	ಕುಷ್ಟಗಿ	ಪುರ ಕೆರೆ	1335	
103	ಕುಷ್ಟಗಿ	ಮೆಣೇದಾಳ ಜಿನುಗುಕೆರೆ	41	
104	ಕುಷ್ಟಗಿ	ಹಿರೇಮನ್ನಾಪುರ ಜಿನುಗುಕೆರೆ	60	
105	ಕುಷ್ಟಗಿ	ಟೆಂಗುಂಟಿ ಜಿನುಗುಕೆರೆ	50	
106	ಕುಷ್ಟಗಿ	ಕಲಕೇರಿ ಜಿನುಗುಕೆರೆ	48	
107	ಕುಷ್ಟಗಿ	ಗಂಗನಾಳ ಜಿನುಗುಕೆರೆ	65	
108	ಕುಷ್ಟಗಿ	ಲಿಂಗದಳ್ಳಿ ಜಿನುಗುಕೆರೆ	73	
109	ಕುಷ್ಟಗಿ	ಕೊರಡಕೇರಾ ಜಿನುಗುಕೆರೆ	48	
110	ಕುಷ್ಟಗಿ	ವಣಗೇರಿ ಜಿನುಗುಕೆರೆ	44	
111	ಕುಷ್ಟಗಿ	ಗುಮಗೇರಿ ಜಿನುಗುಕೆರೆ	50	
112	ಕುಷ್ಟಗಿ	ನಂದಾಪುರ ಜಿನುಗುಕೆರೆ	41	
113	ಕುಷ್ಟಗಿ	ತಳುವಗೇರಾ ಜಿನುಗುಕೆರೆ	40	
114	ಕುಷ್ಟಗಿ	ವಿರಾಪುರ ಜಿನುಗುಕೆರೆ	41	
115	ಕುಷ್ಟಗಿ	ಮುದೇನೂರ ಜಿನುಗುಕೆರೆ	43	
116	ಕುಷ್ಟಗಿ	ಮಸ್ಕೇರಾಳ ಜಿನುಗುಕೆರೆ	40	
117	ಕುಷ್ಟಗಿ	ಗಡ್ಡೇರಹಟ್ಟಿ ಜಿನುಗುಕೆರೆ	40	
118	ಕುಷ್ಟಗಿ	ಗೇರಿಪುರ ಜಿನುಗುಕೆರೆ	41	
119	ಕುಷ್ಟಗಿ	ಕಳಮಳ್ಳಿ ಜಿನುಗುಕೆರೆ	40	
120	ಕುಷ್ಟಗಿ	ಹೊಮ್ಮಿನಾಳ ಜಿನುಗುಕೆರೆ	40	
121	ಕುಷ್ಟಗಿ	ಹೊನಗಡ್ಡಿ ಜಿನುಗುಕೆರೆ	42	
122	ಕುಷ್ಟಗಿ	ಅಮರಾಪುರ ತಾಂಡಾ ಜಿನುಗುಕೆರೆ	64	
		ಒಟ್ಟು	**15840**	

ಶ್ರೀ ಆಚಾರ್ ಹಾಲಪ್ಪ ಬಸಪ್ಪ ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:365 (ಇ) ಕ್ಕೆ ಅನುಬಂಧ-2

ಕೊಪ್ಪಳ ಏತ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

ಕ್ರಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕೆರೆ ಅಭಿವೃದ್ಧಿ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ	ಷರಾ
1	2	3	4	5	6	7	8
1	ಯಲಬುರ್ಗಾ	4702-ಪ್ರಧಾನ ಕಾಮಗಾರಿಗಳು	ಬಳೂಟಗಿ ಗ್ರಾಮದ ಕೆರೆಯ ಅಭಿವೃದ್ಧಿ ಕಾಮಗಾರಿ	100.00	88.03	ಪ್ರಗತಿಯಲ್ಲಿದೆ	
2	ಯಲಬುರ್ಗಾ	4702-ಪ್ರಧಾನ ಕಾಮಗಾರಿಗಳು	ಕೊಪ್ಪಳ ಜಿಲ್ಲೆ, ಯಲಬುರ್ಗಾ ವಿಧಾನ ಸಭಾ ಕ್ಷೇತ್ರದ ಮಲಕಸಮುದ್ರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ.	70.00	0.00	ಪ್ರಗತಿಯಲ್ಲಿದೆ	
3	ಯಲಬುರ್ಗಾ	ವಿಶೇಷ ಘಟಕ ಯೋಜನೆ	ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಮುರಡಿಕೆರೆ ಅಭಿವೃದ್ಧಿ ಕಾಮಗಾರಿ	170.00	62.66	ಪ್ರಗತಿಯಲ್ಲಿದೆ	
4	ಕುಕನೂರ	ಹೆಚ್.ಕೆ.ಡಿ.ಬಿ	ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ವಟಪರ್ವಿ ಕೆರೆ ಜೀರ್ಣೋದ್ಧಾರ.	80.00	0.00	ಕಾರ್ಯಾದೇಶ ನೀಡಬೇಕಾಗಿದೆ	
5	ಕುಕನೂರ	ಡಿ.ಎಮ್.ಎಫ್	ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ಬೇಣಕಲ್ ಕೆರೆ ಅಭಿವೃದ್ಧಿ.	100.00	0.00	ಪ್ರಗತಿಯಲ್ಲಿದೆ	
			ಒಟ್ಟು	**520.00**	**150.69**		

ಶ್ರೀ ಆಚಾರ್ ಹಾಲಪ್ಪ ಬಸಪ್ಪ ಮಾನ್ಯ ವಿಧಾನ ಸಭಾ ಸದಸ್ಯರು (ಯಲಬುರ್ಗಾ) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:365 (ಈ) ಕ್ಕೆ ಅನುಬಂಧ-3

ಯಲಬುರ್ಗಾ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 2 ವರ್ಷಗಳಲ್ಲಿ (2018-19 ರಿಂದ 2019-20) ಕೆರೆಗಳ, ಚೆಕ್ ಡ್ಯಾಮ್ ಗಳ ಅಭಿವೃದ್ಧಿಗಾಗಿ ಸಣ್ಣ ನೀರಾವರಿ ಇಲಾಖೆಯಿಂದ ವಿನಿಯೋಗಿಸಿದ ಅನುದಾನದ ವಿವರ

ರೂ.ಲಕ್ಷಗಳಲ್ಲಿ

ಕ್ರ.ಸಂ.	ತಾಲ್ಲೂಕು	ವರ್ಷ	ಲೆಕ್ಕ ಶೀರ್ಷಿಕೆ	ಕೆರೆ/ಚೆಕ್ ಡ್ಯಾಮ್ ಅಭಿವೃದ್ಧಿ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಇದುವರೆಗಿನ ವೆಚ್ಚ	ಪ್ರಗತಿಯ ಹಂತ		ಷರಾ
							ಪೂರ್ಣಗೊಂಡಿದ	ಪ್ರಗತಿಯಲ್ಲಿದೆ	
1	2	3	4	5	6	7	8	9	10
1	ಯಲಬುರ್ಗಾ	2018-19	4702-ಪ್ರಧಾನ ಕಾಮಗಾರಿಗಳು	ಕೊಪ್ಪಳ ಜಿಲ್ಲೆ, ಯಲಬುರ್ಗಾ ವಿಧಾನ ಸಭಾ ಕ್ಷೇತ್ರದ ಮಲಕಸಮುದ್ರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ.	70.00	0.00		ಪ್ರಗತಿಯಲ್ಲಿದೆ	
2	ಯಲಬುರ್ಗಾ	2018-19	4702-ಪ್ರಧಾನ ಕಾಮಗಾರಿಗಳು	ಕೊಪ್ಪಳ ಜಿಲ್ಲೆ, ಯಲಬುರ್ಗಾ ವಿಧಾನ ಸಭಾ ಕ್ಷೇತ್ರದ ಸಂಗನಾಳ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ.	55.00	0.00		ಪ್ರಗತಿಯಲ್ಲಿದೆ	
3	ಯಲಬುರ್ಗಾ	2018-19	4702-ಪ್ರಧಾನ ಕಾಮಗಾರಿಗಳು	ಕೊಪ್ಪಳ ಜಿಲ್ಲೆ, ಯಲಬುರ್ಗಾ ವಿಧಾನ ಸಭಾ ಕ್ಷೇತ್ರದ ಬನ್ನಿಕೊಪ್ಪ ಗ್ರಾಮದ ಕೆರೆಯ ಕೋಡಿ ನಿರ್ಮಾಣ ಕಾಮಗಾರಿ.	20.00	0.00	ಪೂರ್ಣಗೊಂಡಿದ		
4	ಯಲಬುರ್ಗಾ	2019-20	ವಿಶೇಷ ಘಟಕ ಯೋಜನೆ	ಕೊಪ್ಪಳ ಜಿಲ್ಲ ಯಲಬುರ್ಗಾ ತಾಲ್ಲೂಕಿನ ಬಂಡಿಹಾಳ ಕೆರೆ ಅಭಿವೃದ್ಧಿ ಕಾಮಗಾರಿ	184.00	37.34		ಪ್ರಗತಿಯಲ್ಲಿದೆ	
5	ಯಲಬುರ್ಗಾ	2019-20	ವಿಶೇಷ ಘಟಕ ಯೋಜನೆ	ಕೊಪ್ಪಳ ಜಿಲ್ಲ ಯಲಬುರ್ಗಾ ತಾಲ್ಲೂಕಿನ ಮುರಡಿಕೆರೆ ಅಭಿವೃದ್ಧಿ ಕಾಮಗಾರಿ	170.00	62.66		ಪ್ರಗತಿಯಲ್ಲಿದೆ	
6	ಕುಕನೂರ	2019-20	ಹೆಚ್.ಕೆ.ಡಿ.ಬಿ	ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ವಟಪರ್ವಿ ಕೆರೆ ಜೀರ್ಣೋದ್ಧಾರ ಕಾಮಗಾರಿ.	80.00	0.00			ಕಾರ್ಯಾದೇಶ ನೀಡಬೇಕಾಗಿದೆ.
7	ಕುಕನೂರ	2019-20	ಹೆಚ್.ಕೆ.ಡಿ.ಬಿ	ಕುಕನೂರ ತಾಲ್ಲೂಕಿನ ಸೋಂಪುರ ಗ್ರಾಮದಲ್ಲಿ ಸೋಂಪುರ ಕೆರೆ ಅಭಿವೃದ್ಧಿ	60.00	0.00		ಪ್ರಗತಿಯಲ್ಲಿದೆ	
8	ಕುಕನೂರ	2019-20	ಹೆಚ್.ಕೆ.ಡಿ.ಬಿ	ಕುಕನೂರ ತಾಲ್ಲೂಕಿನ ಕುದುರಿಮೋತಿ ಗ್ರಾಮದಲ್ಲಿ ಕುದುರಿಮೋತಿ ಕೆರೆ ಅಭಿವೃದ್ಧಿ	100.00	0.00		ಪ್ರಗತಿಯಲ್ಲಿದೆ	
9	ಕುಕನೂರ	2019-20	ಹೆಚ್.ಕೆ.ಡಿ.ಬಿ	ಕುಕನೂರ ತಾಲ್ಲೂಕಿನ ಚಿಕ್ಕೇನಕೊಪ್ಪ ಗ್ರಾಮದಲ್ಲಿ ಚಿಕ್ಕೇನಕೊಪ್ಪ ಕೆರೆ ಅಭಿವೃದ್ಧಿ	150.00	0.00		ಪ್ರಗತಿಯಲ್ಲಿದೆ	
10	ಕುಕನೂರ	2019-20	ಹೆಚ್.ಕೆ.ಡಿ.ಬಿ	ಕುಕನೂರ ತಾಲ್ಲೂಕಿನ ತೊಂಡಿಹಾಳ ಗ್ರಾಮದಲ್ಲಿ ತೊಂಡಿಹಾಳ ಕೆರೆ ಅಭಿವೃದ್ಧಿ	150.00	0.00		ಪ್ರಗತಿಯಲ್ಲಿದೆ	
11	ಕುಕನೂರ	2019-20	ಡಿ.ಎಮ್.ಎಫ್	ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ಬೇಣಕಲ್ ಕೆರೆ ಅಭಿವೃದ್ಧಿ ನಿರ್ಮಾಣ	100.00	0.00		ಪ್ರಗತಿಯಲ್ಲಿದೆ	
12	ಕುಕನೂರ	2019-20	ಡಿ.ಎಮ್.ಎಫ್	ಕುಕನೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ಉದ್ದೇಶಕ್ಕಾಗಿ ದ್ಯಾಂಪೂರ ಗ್ರಾಮದಲ್ಲಿ ಪರ್ಕಲೇಷನ್ ಟ್ಯಾಂಕ್ ಅಭಿವೃದ್ಧಿ ಪಡಿಸುವ ಕಾಮಗಾರಿ.	100.00	0.00		ಪ್ರಗತಿಯಲ್ಲಿದೆ.	
				ಒಟ್ಟು	1239.00	100.00			

ಶ್ರೀ [illegible] ಮಾನ್ಯ ವಿಧಾನ ಸಭೆ ಸದಸ್ಯರು(ಯಲಬುರ್ಗಾ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:365 (ಉ) ಕ್ಕೆ ಅನುಬಂಧ-4

ಯಲಬುರ್ಗಾ ವಿಧಾನ ಸಭಾ ಕ್ಷೇತ್ರದಲ್ಲಿ ಕೈಗೊಳ್ಳಲಾದ ಜಿನುಗು ಕೆರೆ/ಚೆಕ್ ಡ್ಯಾಮ್ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

ಕ್ರ.ಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಜಿನುಗು ಕೆರೆ/ಚೆಕ್ ಡ್ಯಾಮ್ ನಿರ್ಮಾಣ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಪ್ರಗತಿಯ ಹಂತ	ಷರಾ
1	2	3	4	5	6	7	8
1	ಯಲಬುರ್ಗಾ	ನಬಾರ್ಡ ಅಣೆಕಟ್ಟು ಪಿಕಪ್	ಚಿಕ್ಕೇನಕೊಪ್ಪ ಹತ್ತಿರ ಹರಿಯುವ ಹಳ್ಳಕ್ಕೆ ಅಡ್ಡಲಾಗಿ ಪಿಕ್‌ಅಪ್ ನಿರ್ಮಾಣ ಕಾಮಗಾರಿ	100.00	64.72	ಪ್ರಗತಿಯಲ್ಲಿದೆ	
2	ಯಲಬುರ್ಗಾ	ಪ್ರಧಾನ ಕಾಮಗಾರಿ ಅಣೆಕಟ್ಟು ಪಿಕಪ್	ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಯರೇಹಂಚಿನಾಳ ಗ್ರಾಮದ ಆಶ್ರಯ ಕಾಲೋನಿ ಹತ್ತಿರ ಕಾಜ್‌ವೇ ಕಂ ಚೆಕ್ ಡ್ಯಾಂ ನಿರ್ಮಾಣ	50.00	0.00	ಪ್ರಗತಿಯಲ್ಲಿದೆ	
3	ಯಲಬುರ್ಗಾ	ಪ್ರಧಾನ ಕಾಮಗಾರಿ ಅಣೆಕಟ್ಟು ಪಿಕಪ್	ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಚೌಡಾಪುರ ಗ್ರಾಮದ ಹತ್ತಿರ ಹರಿಯುವ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	85.00	0.00	ಪ್ರಗತಿಯಲ್ಲಿದೆ	
4	ಯಲಬುರ್ಗಾ	ಪ್ರಧಾನ ಕಾಮಗಾರಿ ಅಣೆಕಟ್ಟು ಪಿಕಪ್	ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಗಾಣದಾಳ ಗ್ರಾಮದ ಹತ್ತಿರ ಹರಿಯುವ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	75.00	0.00	ಪ್ರಗತಿಯಲ್ಲಿದೆ	
5	ಯಲಬುರ್ಗಾ	ಪ್ರಧಾನ ಕಾಮಗಾರಿ ಅಣೆಕಟ್ಟು ಪಿಕಪ್	ಕೊಪ್ಪಳ ಜಿಲ್ಲೆ ಯಲಬುರ್ಗಾ ಪಟ್ಟಣದ ಹತ್ತಿರ ಹರಿಯುವ ಉಸುಕಿನ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	75.00	0.00	ಪ್ರಗತಿಯಲ್ಲಿದೆ	
6	ಯಲಬುರ್ಗಾ	ವಿಶೇಷ ಘಟಕ ಯೋಜನೆ	ಕೊಪ್ಪಳ ಜಿಲ್ಲೆ ಯಲಬುರ್ಗಾ ವಿಧಾನಸಭಾ ಕ್ಷೇತ್ರ ಯಲಬುರ್ಗಾ ಪಟ್ಟಣದ ಹತ್ತಿರ ಹರಿಯುವ ವರನ ಹಳ್ಳಕ್ಕೆ ಸರ್ವೆ ನಂ.529 ರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	25.00	23.26	ಪ್ರಗತಿಯಲ್ಲಿದೆ	
7	ಯಲಬುರ್ಗಾ	ವಿಶೇಷ ಘಟಕ ಯೋಜನೆ	ಕೊಪ್ಪಳ ಜಿಲ್ಲೆ ಯಲಬುರ್ಗಾ ಪಟ್ಟಣದ ಹತ್ತಿರ ಹರಿಯುವ ವರನ ಹಳ್ಳಕ್ಕೆ ಸರಣಿ ಚೆಕ್ ಡ್ಯಾಂ ನಿರ್ಮಾಣ	60.00	0.00	ಪ್ರಗತಿಯಲ್ಲಿದೆ	
8	ಯಲಬುರ್ಗಾ	ಗಿರಿಜನ ಉಪಯೋಜನೆ	ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲ್ಲೂಕು ಗುಂಟುಮಡು ಗ್ರಾಮದ ಹತ್ತಿರ ಹರಿಯುವ ಸವಳು ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ.	120.00	99.46	ಪ್ರಗತಿಯಲ್ಲಿದೆ	
9	ಯಲಬುರ್ಗಾ	ಗಿರಿಜನ ಉಪಯೋಜನೆ	ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕು ತೊಂಡಿಹಾಳ ಗ್ರಾಮದ ಹತ್ತಿರ ಹರಿಯುವ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ.	55.00	49.00	ಪ್ರಗತಿಯಲ್ಲಿದೆ	
10	ಯಲಬುರ್ಗಾ	ಗಿರಿಜನ ಉಪಯೋಜನೆ	ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕು ಹಿರೇಅರಳಿಹಳ್ಳಿ ಗ್ರಾಮದ ಹತ್ತಿರ ಹರಿಯುವ ಯರೇ ಹಳ್ಳಕ್ಕೆ ಸರಣಿ ಚೆಕ್ ಡ್ಯಾಂ ನಿರ್ಮಾಣ.	105.00	0.00	ಪ್ರಗತಿಯಲ್ಲಿದೆ	
			ಒಟ್ಟು	750.00	236.44		

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	382
ಸದಸ್ಯರ ಹೆಸರು	:	ಶ್ರೀ ತುಕಾರಾಮ್ ಈ. (ಸಂಡೂರ್)
ಉತ್ತರಿಸಬೇಕಾದ ದಿನಾಂಕ	:	08.12.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಿದ್ಯುತ್ ದರವನ್ನು ಇತ್ತೀಚೆಗೆ ಪರಿಷ್ಕರಿಸಿರುವುದು ನಿಜವೇ;	ರಾಜ್ಯದಲ್ಲಿ 2020-21 ನೇ ಸಾಲಿಗೆ ಅನ್ವಯವಾಗುವಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವುದ 1 ನೇ ನವೆಂಬರ್ 2020 ರಿಂದ ಅಥವಾ ನಂತರ ಬರುವ ಮೊದಲನೆಯ ಮಾಪಕ ಓದುವ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ:4-11-2020 ರಂದು ವಿದ್ಯುತ್ ದರವನ್ನು ಪರಿಷ್ಕರಿಸಿ ಆದೇಶವನ್ನು ಹೊರಡಿಸಿರುತ್ತದೆ.
ಆ)	ಹಾಗಿದ್ದಲ್ಲಿ, ದರ ಪರಿಷ್ಕರಣೆಯ ವಿವರಗಳೇನು;	2020-21ನೇ ಸಾಲಿನ ವಿದ್ಯುಚ್ಛಕ್ತಿ ದರ ಪರಿಷ್ಕರಣೆಯ ವಿವರಗಳ ಅನುಬಂಧವನ್ನು ಲಗತ್ತಿಸಲಾಗಿದೆ.
ಇ)	ಕೋವಿಡ್ ಸೋಂಕಿನ ಹಿನ್ನೆಲೆಯಲ್ಲಿ ರಾಜ್ಯದ ಜನರು ಕೈಗಾರಿಕೆಯ ಹಾಗೂ ಇನ್ನಿತರ ಕ್ಷೇತ್ರದಲ್ಲಿನ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿ ತೊಂದರೆಗೀಡಾಗಿದ್ದರೂ ವಿದ್ಯುತ್ ದರ ಏರಿಕೆ ಸಮಂಜಸದಿಂದ ಕೂಡಿದೆಯೇ? (ಮಾಹಿತಿ ನೀಡುವುದು)	ವಿದ್ಯುತ್ ದರ ಪರಿಷ್ಕರಣೆ ಪ್ರಕ್ರಿಯೆಯು ಪ್ರತಿ ವರ್ಷ ನಡೆಯುವ ಪ್ರಕ್ರಿಯೆಯಾಗಿದ್ದು, ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಅನುಮೋದನೆಗೊಳಪಟ್ಟಿರುತ್ತದೆ. ಸಾಮಾನ್ಯವಾಗಿ ಪ್ರತಿ ವರ್ಷದ ಏಪ್ರಿಲ್ ಮೊದಲ ದಿನದಂದಲೇ ಪರಿಷ್ಕೃತ ವಿದ್ಯುತ್ ದರ ಜಾರಿಗೆ ತರಬೇಕಾಗಿರುತ್ತದೆ. ಕೋವಿಡ್-19 ನಿಂದಾಗಿ ಎಲ್ಲ ವಲಯಗಳ ನಡುವೆ ಪ್ರತಿಕೂಲ ಆರ್ಥಿಕ ಪರಿಸ್ಥಿತಿ ಇರುವುದರಿಂದ, ಈ ವರ್ಷ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಪರಿಷ್ಕೃತ ದರಗಳನ್ನು ದಿನಾಂಕ: 01.11.2020 ಅಥವಾ ಅದರ ನಂತರದ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಜಾರಿಗೆ ಬರುವಂತೆ ಆರ್ಥಿಕ ವರ್ಷ 2020-21 ರಲ್ಲಿ 5 (ಐದು) ತಿಂಗಳ ಅವಧಿಗೆ ಪರಿಷ್ಕೃತ ದರಗಳನ್ನು ವಿಧಿಸಲು ಆದೇಶಿಸಿರುತ್ತದೆ. ವಿದ್ಯುತ್ ದರವನ್ನು ಹೆಚ್ಚಿಸಲು ಕಾರಣವಾಗುವ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ: • ವಿದ್ಯುತ್ ಬೇಡಿಕೆಯನ್ನು ಪೂರೈಸಲು ಹೊಸ ಉಷ್ಣ ವಿದ್ಯುತ್ ಕೇಂದ್ರ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ತನ್ನು ಖರೀದಿಸಬೇಕಾಗಿರುವುದರಿಂದ ವಿದ್ಯುತ್ ಖರೀದಿಯ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದುದರಿಂದ ಜಕಾತಿ ಹೆಚ್ಚಳವು ಅನಿವಾರ್ಯವಾಗಿರುತ್ತದೆ.

		• ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದಗಳಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಉಷ್ಣ ವಿದ್ಯುತ್ ಕೇಂದ್ರಗಳಿಗೆ ಪ್ರತಿ ತಿಂಗಳು ನಿಗದಿತ ವೆಚ್ಚವನ್ನು ಭರಿಸಬೇಕಾಗಿರುತ್ತದೆ. • ಇದಲ್ಲದೆ, ನೌಕರರ ಸಂಬಳದ ಪರಿಷ್ಕರಣೆ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಬಂಡವಾಳ ವೆಚ್ಚ ಮತ್ತು ಕಾರ್ಯನಿರತ ಬಂಡವಾಳಕ್ಕಾಗಿ ಸಾಲಗಳ ಮೇಲಿನ ಬಡ್ಡಿ ವೆಚ್ಚಗಳು ಜಕಾತಿ ಪರಿಷ್ಕರಣೆಯಲ್ಲಿ ಒಳಗೊಂಡಿರುತ್ತದೆ.

ಸಂಖ್ಯೆ: ಎನರ್ಜಿ 197 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಅನುಬಂಧ (388)

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ: 16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,

ಬೆಂಗಳೂರು–560052

ಪತ್ರಿಕಾ ಪ್ರಕಟಣೆ

2020-21ನೇ ಸಾಲಿನ ವಿದ್ಯುಚ್ಛಕ್ತಿದರ ಪರಿಷ್ಕರಣೆ:

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಆರ್ಥಿಕ ವರ್ಷ 2020-21ರ (1ನೇ ಏಪ್ರಿಲ್, 2020 ರಿಂದ 31ನೇ ಮಾರ್ಚ್, 2021 ರವರೆಗೆ) ವಿದ್ಯುಚ್ಛಕ್ತಿ ಪೂರೈಕೆ ದರಗಳ ಪರಿಷ್ಕರಣೆಯನ್ನು ಅನುಮೋದಿಸಿದೆ. ಆಯೋಗವು ಆರ್ಥಿಕ ವರ್ಷ 2020–21ರ ಅವಧಿಯಲ್ಲಿ ಸರಾಸರಿ ಶೇ.5.40% ರಂತೆ ಪ್ರತಿ ಯೂನಿಟ್‌ಗೆ ಸರಾಸರಿ 40 (ನಲವತ್ತು) ಪೈಸೆ (ಡಿಮಾಂಡ್ ಮತ್ತು ವಿದ್ಯುತ್ ಬಳಕೆ ದರಗಳಲ್ಲಿನ ಹೆಚ್ಚಳವನ್ನು ಪರಿಗಣಿಸಿ) ಹೆಚ್ಚಳವನ್ನು ಅನುಮೋದಿಸಿದೆ.

ಆಯೋಗವು ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಮಂಗಳೂರು ಮತ್ತು ಬೆಳಗಾವಿ ಜಿಲ್ಲೆಯಲ್ಲಿನ ಏಕಸ್ ವಿಶೇಷ ಆರ್ಥಿಕ ವಲಯ (AEQUS SEZ) ಗಳ ಗ್ರಾಹಕರಿಗೆ ಅನ್ವಯವಾಗುವ ಪರಿಷ್ಕೃತ ಚಿಲ್ಲರೆ ವಿದ್ಯುಚ್ಛಕ್ತಿ ಸರಬರಾಜು ದರಗಳನ್ನೂ ಸಹ ನಿರ್ಧರಿಸಿದೆ.

ಆರ್ಥಿಕ ವರ್ಷ 2021ರ ಅವಧಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಕ.ವಿ.ಪ್ರ.ನಿ.ನಿ. (KPTCL) ವಸೂಲಿ ಮಾಡಬೇಕಾದ ಪರಿಷ್ಕೃತ ವಿದ್ಯುಚ್ಛಕ್ತಿ ಪ್ರಸರಣ ದರಗಳನ್ನೂ ಸಹ ನಿರ್ಧರಿಸಿದೆ.

ಈ ಪರಿಷ್ಕೃತ ದರಗಳು 1ನೇ ನವೆಂಬರ್ 2020 ಅಥವಾ ಅದರ ನಂತರದ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಮಾಡಿದ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ಸಾಮಾನ್ಯವಾಗಿ ಪ್ರತಿ ವರ್ಷದ ಏಪ್ರಿಲ್ ಮೊದಲ ದಿನದಿಂದಲೇ ಪರಿಷ್ಕೃತ ವಿದ್ಯುತ್ ದರವನ್ನು ಜಾರಿಗೆ ತರಬೇಕಿತ್ತು. ಆದರೆ, ಈ ಕೆಳಗಿನ ಕಾರಣಗಳಿಂದಾಗಿ, ದರ ಪರಿಷ್ಕರಣಾ ಆದೇಶವನ್ನು ಸಕಾಲದಲ್ಲಿ ಹೊರಡಿಸಲು ಆಯೋಗಕ್ಕೆ ಸಾಧ್ಯವಾಗಿರುವುದಿಲ್ಲ:

a) ವಿಶ್ವದಾದ್ಯಂತ, ಭಾರತದಲ್ಲಿ ಮತ್ತು ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಕೋವಿಡ್-19 ಸಾಂಕ್ರಮಿಕ ವಿಷಮ ಪರಿಸ್ಥಿತಿಯಿಂದಾಗಿ ಸಂಪೂರ್ಣ ಬಂದ್ ಹೇರಲಾಗಿದ್ದರಿಂದ ಎಲ್ಲಾ ವಲಯಗಳ ಆರ್ಥಿಕತೆಯ ಮೇಲೆ ತೀವ್ರ ಪರಿಣಾಮ ಬೀರಿರುವ ಕಾರಣ.
b) 2020ರ ಜನವರಿಯಲ್ಲಿ ಹೊರಡಿಸಲಾದ ಕೆಇಆರ್‌ಸಿ ಆದೇಶದ ವಿರುದ್ಧ ಕೆಪಿಟಿಸಿಎಲ್ ಮಾನ್ಯ ವಿದ್ಯುಚ್ಛಕ್ತಿ ಮೇಲ್ಮನವಿ ನ್ಯಾಯಾಧೀಕರಣದ (ಎಟಿಇ) ಮುಂದೆ ಸಲ್ಲಿಸಿದ ಮೇಲ್ಮನವಿಯ ಬಾಕಿಯಿದ್ದು ಮತ್ತು ಈ ಮೇಲ್ಮನವಿಯನ್ನು 05.10.2020 ರಂದು ಮಾನ್ಯ ವಿದ್ಯುಚ್ಛಕ್ತಿ ಮೇಲ್ಮನವಿ ನ್ಯಾಯಾಧೀಕರಣವು (ಎಟಿಇ) ವಿಲೇವಾರಿ ಮಾಡಿದ್ದರಿಂದ.
c) ಸಿರಾ ಮತ್ತು ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರಗಳಲ್ಲಿ ದಿನಾಂಕ 03.11.2020 ರಂದು ನಡೆಯಬೇಕಾದ ಉಪಚುನಾವಣೆ ಘೋಷಣೆಯಿಂದಾಗಿ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ.

ಪ್ರಸ್ತುತ ವಿದ್ಯುತ್ ಬೇಡಿಕೆಯನ್ನು ಪೂರೈಸಲು, ಹೊಸ ಉಷ್ಣ ವಿದ್ಯುತ್ ಮೂಲಗಳಿಂದ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುಚ್ಛಕ್ತಿ ಖರೀದಿಸುವುದರಿಂದ, ವಿದ್ಯುತ್ ಖರೀದಿಯ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದರಿಂದ ಸರಬರಾಜು ದರದಲ್ಲಿನ ಹೆಚ್ಚಳವು ಅನಿವಾರ್ಯವಾಗಿದೆ. ಕಾರ್ಯ ಮತ್ತು ನಿರ್ವಹಣೆ ಮತ್ತು ಬಂಡವಾಳ ವೆಚ್ಚಕ್ಕಾಗಿ ಪಡೆಯುವ ಸಾಲದ ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇವೆ.

ಪ್ರಸಕ್ತ ಜಾರಿಯಲ್ಲಿರುವ ಕೋವಿಡ್-19 ನಿಂದಾಗಿ ಆರ್ಥಿಕ ವಲಯದ ಎಲ್ಲ ವಲಯಗಳ ನಡುವೆ ಪ್ರತಿಕೂಲ ಆರ್ಥಿಕ ಪರಿಸ್ಥಿತಿ ಇರುವುದರಿಂದ, ಈ ವರ್ಷ, ಆಯೋಗವು, ಪರಿಷ್ಕೃತ ದರಗಳನ್ನು ದಿನಾಂಕ 01.11.2020 ಅಥವಾ ಅದರ ನಂತರದ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಮಾಡಿದ ವಿದ್ಯುಚ್ಛಕ್ತಿಗೆ ಅನ್ವಯವಾಗುವಂತೆ ಆರ್ಥಿಕ ವರ್ಷ 2021 ರಲ್ಲಿ 5

(ಐದು) ತಿಂಗಳ ಅವಧಿಗೆ ಮಾತ್ರ ಪರಿಷ್ಕೃತ ದರದಲ್ಲಿ ವಸೂಲಾತಿಗೆ ಅವಕಾಶ ನೀಡಲು ತೀರ್ಮಾನಿಸಿರುತ್ತದೆ.

ದರ ಪರಿಷ್ಕರಣೆಯಿಂದ ವಸೂಲು ಮಾಡಬಹುದಾಗಿದ್ದ ಒಟ್ಟು ಆದಾಯದ ಕೊರತೆಯಾದ 2,473 ಕೋಟಿ ರೂಪಾಯಿಗಳಲ್ಲಿ, 2020ರ ಏಪ್ರಿಲ್ 1ರಿಂದ, 2020ರ ಅಕ್ಟೋಬರ್ 31ರವರೆಗೆ (7 ತಿಂಗಳಲ್ಲಿ) ದರ ಪರಿಷ್ಕರಣೆಯಿಂದಾಗಿ ವಸೂಲು ಮಾಡಬಹುದಾಗಿದ್ದ 1,443 ಕೋಟಿ ರೂಪಾಯಿಗಳನ್ನು ನಿಯಂತ್ರಕ ಸ್ವತ್ತಾಗಿ (Regulatory Asset) ಇಟ್ಟು, ಪ್ರಸ್ತುತ ಕೋವಿಡ್ – 19 ಸಾಂಕ್ರಾಮಿಕ ಪರಿಸ್ಥಿತಿಯಿಂದಾಗಿ ಚಾಲ್ತಿಯಲ್ಲಿರುವ ಪ್ರತಿಕೂಲ ಆರ್ಥಿಕ ಪರಿಸ್ಥಿತಿಗಳಿಂದಾಗಿ ಗ್ರಾಹಕರಿಗೆ ಹೊರೆಯಾಗದಂತೆ ಆರ್ಥಿಕ ವರ್ಷ 2022 & 2023ರ ಚಿಲ್ಲರೆ ವಿದ್ಯುತ್ ಪೂರೈಕೆ ದರ ನಿರ್ಧರಣೆಯಲ್ಲಿ ವಸೂಲಿ ಮಾಡಲು ತೀರ್ಮಾನಿಸಿರುತ್ತದೆ. ಉಳಿದ ಆದಾಯದ ಕೊರತೆಯಾದ 1,030 ಕೋಟಿ ರೂಪಾಯಿಗಳನ್ನು ಆರ್ಥಿಕ ವರ್ಷ 2021ರ ಉಳಿದ 5 ತಿಂಗಳ ಅವಧಿಯಲ್ಲಿ ವಿದ್ಯುತ್ ದರ ಪರಿಷ್ಕರಣೆ ಮೂಲಕ ವಸೂಲಾತಿಗೆ ಅನುಮೋದಿಸಿದೆ.

ದರ ಹೆಚ್ಚಳಕ್ಕೆ ಪ್ರಮುಖ ಕಾರಣಗಳು:

ಗ್ರಾಹಕರ ವಿದ್ಯುಚ್ಛಕ್ತಿ ಬಳಕೆಯನ್ನು ಗಣನೆಗೆ ತೆಗೆದುಕೊಳ್ಳದಂತೆ, ವಿ.ಸ.ಕಂಪನಿಗಳು (ESCOMs) ಪ್ರತಿ ತಿಂಗಳು ಈ ಕೆಳಗಿನ ನಿಗದಿತ ವೆಚ್ಚಗಳನ್ನು ಭರಿಸಲೇ ಬೇಕಾಗಿರುತ್ತದೆ:

a) ದೀರ್ಘಾವಧಿ ವಿದ್ಯುತ್ ಖರೀದಿ ಒಪ್ಪಂದಗಳ ಕಾರಣ ಉಷ್ಣ ವಿದ್ಯುತ್ ಸ್ಥಾವರಗಳಿಗೆ ನಿಗದಿತ ವೆಚ್ಚಗಳ ಪಾವತಿ.

b) ಸಿಬ್ಬಂದಿಗೆ ವೇತನ ಪರಿಷ್ಕರಣೆ, O & M ವೆಚ್ಚಗಳು ಇತ್ಯಾದಿ.

c) ಬಂಡವಾಳ ವೆಚ್ಚ ಮತ್ತು ಕಾರ್ಯನಿರತ ಬಂಡವಾಳಕ್ಕಾಗಿ ಸಾಲಗಳ ಮೇಲಿನ ಬಡ್ಡಿ.

ಆರ್ಥಿಕ ವರ್ಷ 2020 ಕ್ಕಿಂತ ಆರ್ಥಿಕ ವರ್ಷ 2021 ರ ಅವಧಿಯಲ್ಲಿ ಆಗಬಹುದಾದ ವೆಚ್ಚದಲ್ಲಿನ ಹೆಚ್ಚಳ;

1. ವಿದ್ಯುತ್ ಖರೀದಿ ವೆಚ್ಚದಲ್ಲಿ ಆ.ವ. 20ಕ್ಕಿಂತ 3,132 ಕೋಟಿ ರೂಪಾಯಿಗಳಷ್ಟು ಹೆಚ್ಚಳ (9.2% ಹೆಚ್ಚಳ); ಹೊಸ ಉಷ್ಣ ವಿದ್ಯುತ್ ಕೇಂದ್ರಗಳಿಂದ ಮತ್ತು ನವೀಕರಿಸಬಹುದಾದ ಇಂಧನ ಶಕ್ತಿಯ ವಿದ್ಯುತ್ ದರ ಹೆಚ್ಚಳದಿಂದಾಗಿ.
2. ಕಾರ್ಯ ಮತ್ತು ನಿರ್ವಹಣೆ ವೆಚ್ಚದಲ್ಲಿ 1,050 ಕೋಟಿ ರೂಪಾಯಿಗಳಷ್ಟು ಹೆಚ್ಚಳ (21.45% ಹೆಚ್ಚಳ).
3. ಬಡ್ಡಿ, ಹಣಕಾಸು ಶುಲ್ಕಗಳು ಮತ್ತು ಸವಕಳಿ ದರಗಳಲ್ಲಿ 212 ಕೋಟಿ ರೂಪಾಯಿಗಳಷ್ಟು ಹೆಚ್ಚಳ (6% ಹೆಚ್ಚಳ).
4. ಆ.ವ. 2019ರ ಕೊರತೆ 1,837.16 ಕೋಟಿ ರೂಪಾಯಿಗಳನ್ನು (ಆರ್ಥಿಕ ಪುನರ್ಮನನದ ಅನುಸಾರ) ಮುಂದಕ್ಕೆ ಕೊಂಡಯ್ಯಲಾಗಿರುವುದು.

ವಿದ್ಯುತ್ ಸರಬರಾಜು ಕಂಪನಿಗಳ ಪ್ರಸ್ತಾವನೆ;

ವಿದ್ಯುತ್ ಸರಬರಾಜು ಕಂಪನಿಗಳು ಈ ಕೆಳಗೆ ತಿಳಿಸಿದಂತೆ ಎಲ್ಲಾ ಪ್ರವರ್ಗಗಳ ಗ್ರಾಹಕರಿಗೆ ಪ್ರತಿ ಯೂನಿಟ್ಟಿಗೆ 52 ರಿಂದ 196 ಪೈಸೆಗಳ ವಿಭಿನ್ನ ಏರಿಕೆಯನ್ನು ಕೋರಿದ್ದವು. ವಿದ್ಯುತ್ ಸರಬರಾಜು ಕಂಪನಿವಾರು ಕೋರಿದ್ದ ಏರಿಕೆ ಮತ್ತು ಶೇಕಡಾವಾರು ಏರಿಕೆ ಈ ಕೆಳಕಂಡಂತೆ ಇರುತ್ತದೆ:

ವಿದ್ಯುತ್ ಸರಬರಾಜು ಕಂಪನಿಯ ಹೆಸರು	ಆದಾಯದಲ್ಲಿನ ಯೋಜಿತ ಕೊರತೆ ಕೋಟಿ ರೂ.	ಯೋಜಿತ ವಿದ್ಯುಚ್ಛಕ್ತಿ ಮಾರಾಟ ದಶಲಕ್ಷ ಯೂನಿಟ್	ಏರಿಕೆ ಪ್ರತಿ ಯೂನಿಟ್ಟಿಗೆ	ಯೋಜಿತ ಹಾಲಿ ಆದಾಯ ಕೋಟಿ ರೂ.	ಶೇಕಡ ಏರಿಕೆ
ಬೆ.ವಿ.ಸ.ಕಂ	5,872.09	29,938.60	196	23,268.98	25.24
ಮ.ವಿ.ಸ.ಕಂ	346.09	5,596.19	62	3,905.34	8.86
ಚಾ.ವಿ.ಸ.ನಿ.ನಿ	475.50	6,956.12	68	4,708.42	10.10
ಹು.ವಿ.ಸ.ಕಂ	683.95	13,230.18	52	9,270.67	7.38
ಗು.ವಿ.ಸ.ಕಂ	602.03	7,766.75	78	5,382.67	11.18

ಒಟ್ಟು	7,979.66	63,487.84	126	46,536.08	17.15

ಮೇಲಿನ ಪ್ರಸ್ತಾವನೆಯ ಆಧಾರದಲ್ಲಿ, ರಾಜ್ಯದಲ್ಲಿ, ಕೋರಿರುವ ಸರಾಸರಿ ವಿದ್ಯುತ್ ದರದ ಹೆಚ್ಚಳವು ಪ್ರತಿ ಯೂನಿಟ್‌ಗೆ 1.26 ರೂಪಾಯಿಗಳು ಮತ್ತು ಶೇಕಡಾವಾರು ಹೆಚ್ಚಳವು 17.15 ರಷ್ಟು ಆಗುತ್ತದೆ.

ರಾಜ್ಯದಲ್ಲಿ ಇದುವರೆವಿಗೂ ಏಕರೂಪದ ವಿದ್ಯುಚ್ಛಕ್ತಿ ದರಗಳು ರೂಢಿಯಲ್ಲಿರುವುದರಿಂದ, ಆಯೋಗವು ಬೆಸ್ಕಾಂ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದಲ್ಲಿ ವಿಭಿನ್ನವಾದ ಏರಿಕೆಯೊಂದಿಗೆ ಮಿಕ್ಕೆಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಹಾಗು HRECSಗೆ ಏಕರೂಪದ ಏರಿಕೆಯನ್ನು ಅನುಮೋದಿಸಿದೆ. ಬೆಂಗಳೂರು ಮೆಟ್ರೋ ಮತ್ತು ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಗಳನ್ನು ಹೊರತುಪಡಿಸಿದಂತೆ, ವಿವಿಧ ಹಂತಗಳಲ್ಲಿನ ವಿದ್ಯುತ್ ದರಗಳ ಏರಿಕೆ ಪ್ರತಿ ಯೂನಿಟ್‌ಗೆ 20 ಪೈಸೆಯಿಂದ 25 ಪೈಸೆಯವರೆಗೆ ಇರುತ್ತದೆ. ತಾತ್ಕಾಲಿಕ ವಿದ್ಯುತ್ ಸಂಪರ್ಕಗಳಿಗೆ 50 ಪೈಸೆಯಷ್ಟು ಏರಿಕೆ ಇರುತ್ತದೆ. ವಿದ್ಯುಚ್ಛಕ್ತಿ ದರ ಹೆಚ್ಚಳವು (ನಿಗದಿತ ಶುಲ್ಕ ಸೇರಿದಂತೆ) ಪ್ರತಿ ಯೂನಿಟ್‌ಗೆ ಸರಾಸರಿ **40** ಪೈಸೆಗಳು ಮತ್ತು ಶೇಕಡ **5.40** ರ ಏರಿಕೆ ಇರುತ್ತದೆ.

ಹಾಲಿ ಇರುವ ವಿದ್ಯುಚ್ಛಕ್ತಿ ದರಗಳ ವ್ಯವಸ್ಥೆಯಲ್ಲಿ ಗ್ರಾಹಕರಿಂದ ವಸೂಲಿಯಾಗುವ ನಿಗದಿತ ಶುಲ್ಕ (fixed charges) ವಿದ್ಯುತ್ ಸರಬರಾಜು ಕಂಪನಿಗಳ ವಾಸ್ತವ ನಿಗದಿತ ಖರ್ಚಿಗೆ (fixed cost) ಸಮನಾಗಿರುವುದಿಲ್ಲ. ಹೀಗಾಗಿ, ನಿಗದಿತ ಶುಲ್ಕದ ಗಣನೀಯ ಭಾಗವನ್ನು ವಿದ್ಯುತ್ ಬಳಕೆ ಶುಲ್ಕದ ಮೂಲಕ ಮರುಪಡೆಯಲಾಗುತ್ತಿದೆ. ನಿಗದಿತ ಖರ್ಚಿನ ಶೇಕಡ 27.73 ರಷ್ಟು ಮಾತ್ರ ಹಾಲಿ ವಸೂಲಿಯಾಗುತ್ತಿದ್ದು, ಬಾಕಿ ನಿಗದಿತ ಖರ್ಚನ್ನು ವಿದ್ಯುಚ್ಛಕ್ತಿ ಶುಲ್ಕದ ಮೂಲಕ ವಸೂಲು ಮಾಡಲಾಗುತ್ತಿರುತ್ತದೆ. ಆದುದರಿಂದ ನಿಗದಿತ ಶುಲ್ಕದ ಸಂಪೂರ್ಣ

ವಸೂಲಾತಿಯ ದಿಸೆಯಲ್ಲಿ, ನಿಗದಿತ ಶುಲ್ಕವನ್ನು ವರ್ಷದಿಂದ ವರ್ಷಕ್ಕೆ ಕ್ರಮೇಣವಾಗಿ ಹೆಚ್ಚಿಸಲು ಆಯೋಗವು ನಿರ್ಧರಿಸಿರುತ್ತದೆ. ಅದರಂತೆ ಆಯೋಗವು ಎಲ್ಲಾ ಸ್ಥಾವರಗಳಿಗೆ ಸಂಬಂಧಪಟ್ಟಂತೆ (ನೀರಾವರಿ ಪಂಪ್ ಸೆಟ್ ಸ್ಥಾವರಗಳನ್ನು ಹೊರತುಪಡಿಸಿ) ನಿಗದಿತ ಶುಲ್ಕವನ್ನು ಪ್ರತಿ ಕಿ.ವ್ಯಾ. / ಹೆಚ್.ಪಿ. / ಕೆ.ವಿ.ಎ.ಗೆ ರೂ.10/- ರ ಕನಿಷ್ಠ ಏರಿಕೆಯನ್ನು ಅನುಮೋದಿಸಿದೆ. ನಿಗದಿತ ಶುಲ್ಕದಲ್ಲಿನ ಈ ಕನಿಷ್ಠ ಏರಿಕೆಯೊಂದಿಗೆ, ನಿಗದಿತ ಖರ್ಚಿನ ಚೇತರಿಕೆಯು ಶೇಕಡ 33 ರಷ್ಟಿರುತ್ತದೆ.

ಹೊಸ ದರ ಆದೇಶದ ಪ್ರಮುಖ ಅಂಶಗಳು:

- **ಟಿ.ಒ.ಡಿ ದರದಲ್ಲಿ ಬೆಳಗಿನ ಅತ್ಯಧಿಕ ಬೇಡಿಕೆಯನ್ನು (peak demand) ತೆಗೆದುಹಾಕಿರುವುದು;**

  ಹೆಚ್.ಟಿ ಕೈಗಾರಿಕೆಗಳಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಯನ್ನು ಪ್ರೋತ್ಸಾಹಿಸಲು ಬೆಳಗಿನ 6 ಘಂಟೆಯಿಂದ 10 ಘಂಟೆಯಲ್ಲಿನ ಬೆಳಗಿನ ಅತ್ಯಧಿಕ ಬೇಡಿಕೆ ಅವಧಿಯಲ್ಲಿನ ವಿದ್ಯಚ್ಛಕ್ತಿ ಬಳಕೆಗೆ ವಿದಿಸಲಾಗುತ್ತಿದ್ದ 1 ರೂಪಾಯಿ ದಂಡವನ್ನು ಹಿಂಪಡೆಯಲಾಗಿದೆ.

- **ಸಾರ್ವಜನಿಕ ಬೀದಿ ದೀಪಗಳಲ್ಲಿ ಎಲ್ಇಡಿ ಬಲ್ಬ್ ಗಳ ಬಳಕೆಗೆ ರಿಯಾಯಿತಿ:**

  ಸಾರ್ವಜನಿಕ ಬೀದಿ ದೀಪಗಳಲ್ಲಿ ಎಲ್ಇಡಿ ಬಲ್ಬ್‌ಗಳ ಬಳಕೆಯ ಮೂಲಕ ವಿದ್ಯುಚ್ಛಕ್ತಿಯ ಸಂರಕ್ಷಣೆಯನ್ನು ಉತ್ತೇಜಿಸಲು, ಆಯೋಗವು, ಬಿಬಿಎಂಪಿ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಂದ ಬೀದಿ ದೀಪಗಳ ಅಳವಡಿಕೆಗೆ ಎಲ್ಇಡಿ / ಇಂಡಕ್ಷನ್ ಲ್ಯಾಂಪ್ ಲೈಟಿಂಗ್ ಅನ್ನು ಸ್ಥಾಪಿಸಲು ಪ್ರತಿ ಯೂನಿಟ್‌ಗೆ 100 ಪೈಸೆಗಳಿಂದ 105 ಪೈಸೆಗಳಿಗೆ ರಿಯಾಯಿತಿಯನ್ನು ಹೆಚ್ಚಿಸಿದೆ.

- **ಹೆಚ್.ಟಿ. ಗ್ರಾಹಕರಿಗೆ ವಿಶೇಷ ಪ್ರೋತ್ಸಾಹ ಯೋಜನೆ (Special Incentive Scheme):**

  ಆಯೋಗವು 2018 ರಲ್ಲಿ ಎಲ್ಲಾ ಹೆಚ್.ಟಿ. ಗ್ರಾಹಕರಿಗಾಗಿ ಜಾರಿಗೆ ತಂದಿದ್ದ ವಿಶೇಷ ಪ್ರೋತ್ಸಾಹ ಯೋಜನೆಯನ್ನು ಮುಂದುವರಿಸಿದೆ, ಅದರಂತೆ 10.00 ಗಂಟೆಯಿಂದ 18.00 ಗಂಟೆಯ ಅವಧಿಯಲ್ಲಿನ ವಿದ್ಯುಚ್ಛಕ್ತಿಯ ಬಳಕೆಗಾಗಿ, ಅವುಗಳ ಮೂಲ ಬಳಕೆಗಿಂತ ಹೆಚ್ಚಿನ ಪ್ರತಿ ಯೂನಿಟ್‌ಗೆ ರೂ.1 ರ ಪ್ರೋತ್ಸಾಹವನ್ನು, ಮತ್ತು ರಾತ್ರಿಯ 22.00 ಗಂಟೆಯಿಂದ 6.00 ಗಂಟೆಗಳವರೆಗಿನ ಬಳಕೆಗಾಗಿ ಎಲ್ಲಾ ಘಟಕಗಳಿಗೆ ಪ್ರತಿ ಯೂನಿಟ್‌ಗೆ ರೂ.2 ರ

ಪ್ರೋತ್ಸಾಹವನ್ನು ಮತ್ತು ಸಂಜೆ ಗರಿಷ್ಠ ಸಮಯದಲ್ಲಿ 18.00 ಗಂಟೆಯಿಂದ 22.00 ಗಂಟೆಗಳವರೆಗೆ ಬಳಸುವ ವಿದ್ಯುಚ್ಛಕ್ತಿಗೆ ಪ್ರತಿ ಯೂನಿಟ್‌ಗೆ ಒಂದು ರೂಪಾಯಿ ದಂಡದ ಶುಲ್ಕಗಳನ್ನು ಮುಂದುವರಿಸಿದೆ.

- ➢ ಪರಿಶುದ್ಧ ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಲು, ರಾಜ್ಯದಲ್ಲಿ ಇಂಗಾಲಾಮ್ಲ ಉತ್ಪತ್ತಿ ಕಡಿತ ಮಾಡುವ ದೃಷ್ಟಿಯಿಂದ ಮತ್ತು ಸಾರ್ವಜನಿಕ ಸಾಗಣೆ ವ್ಯವಸ್ಥೆಯನ್ನು ಉಪಯೋಗಿಸಲು ಉತ್ತೇಜಿಸಲು ಆಯೋಗವು ಬೆಂಗಳೂರು ಮೆಟ್ರೊಗೆ ಯಾವುದೇ ದರ ಏರಿಕೆಯನ್ನು ಮಾಡದೆ, ಹಾಲಿ ಇರುವ ರಿಯಾಯಿತಿ ದರ, ಪ್ರತಿ ಯೂನಿಟ್ಟಿಗೆ ರೂ.5.20 ನ್ನು ಮುಂದುವರಿಸಿದೆ ಹಾಗೂ ರೈಲ್ವೆ ಟ್ರಾಕ್ಷನ್‌ಗೆ, ದಿನದ 24 ಘಂಟೆ, ToD (Time of Day) ಮತ್ತು ವಿಶೇಷ ಪ್ರೋತ್ಸಾಹ ಯೋಜನೆ (ಸ್ಪೆಷಲ್ ಇನ್ಸೆಂಟೀವ್ ಸ್ಕೀಮ್) ಇಲ್ಲದಂತೆ, ಪ್ರತಿ ಯೂನಿಟ್ಟಿಗೆ ರೂ.6.45 ರಂತೆ ವಿದ್ಯುತ್ ದರವನ್ನು ಅನುಮೋದಿಸಿದೆ.
- ➢ ಗ್ರಾಹಕರ ವಿದ್ಯುತ್ ಸ್ಥಾವರಗಳ (Installations) ಆವರಣದಲ್ಲಿ ಸ್ಥಾಪಿತವಾದ ಎಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಳಿಗೆ ಮತ್ತು ಕೊಳಚೆ ನೀರು ಶುದ್ಧೀಕರಿಸುವ ಘಟಕಗಳಿಗೆ, ಆಯಾ ಸ್ಥಾವರಗಳಿಗೆ ಅನ್ವಯವಾಗುವ ವಿದ್ಯುತ್ ದರ ಅನ್ವಯಿಸುವುದನ್ನು ಮುಂದುವರೆಸಲಾಗಿದೆ.
- ➢ ಆಯೋಗವು ಘನತ್ಯಾಜ್ಯ ಸಂಸ್ಕರಣೆಯಿಂದಾಗುವ ಪರಿಸರ ಮತ್ತು ಸಾಮಾಜಿಕ ಅನುಕೂಲಗಳನ್ನು ಪರಿಗಣಿಸಿ, ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ (Solid waste processing plants), ಎಲ್.ಟಿ. ಮತ್ತು ಹೆಚ್.ಟಿ. ಕೈಗಾರಿಕಾ ವರ್ಗದ ದರ ಅನ್ವಯಿಸುವುದನ್ನು ಮುಂದುವರೆಸಿದೆ.
- ➢ ಗ್ರಾಹಕರ ಸಮಸ್ಯೆಯನ್ನು ಕಾಲ ಮಿತಿಯೊಳಗೆ ಪರಿಹರಿಸಲು, ಆಯೋಗವು ತನ್ನ ಹಿಂದಿನ ನಿರ್ದೇಶನವನ್ನು ಪುನರುಚ್ಚರಿಸುತ್ತಾ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಉಪವಿಭಾಗದಲ್ಲಿ ಗ್ರಾಹಕ ಸಂಪರ್ಕ ಸಭೆಗಳನ್ನು, ಸಂಬಂಧಿಸಿದ ವ್ಯಾಪ್ತಿಯ ಅಧೀಕ್ಷಕ ಇಂಜಿನಿಯರು ಅಥವಾ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸುವಂತೆ ನಿರ್ದೇಶಿಸಿದೆ. ಅಂಥ ಸಭೆಗಳನ್ನು ನಡೆಸಲು

ವಿಫಲವಾದಲ್ಲಿ, ಸಂಬಂಧಪಟ್ಟ ಅಧಿಕಾರಿಯು ಪಾವತಿಸುವಂತೆ, ಪ್ರತಿ ಉಪವಿಭಾಗಕ್ಕೆ ಒಂದು ಲಕ್ಷ ರೂಪಾಯಿಯವರೆಗೂ ದಂಡ ಹಾಕಲಿದೆ.

- ಕರ್ನಾಟಕ ಸರ್ಕಾರದ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹ ನೀತಿಯನ್ನು, ಪರಿಶುದ್ಧ ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಲು ಹಾಗೂ ಶೇಕಡ 100 ರಷ್ಟು ವಿದ್ಯುತ್ ಚಲನಶೀಲತೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ, ಹಾಗೂ ಪರಿಸರ ಕಾಳಜಿಯ ದೃಷ್ಟಿಯಿಂದ, 2018ರಲ್ಲಿ ಹೊಸದಾಗಿ ಜಾರಿಗೊಳಿಸಿದ್ದ, ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಗಳಿಗಾಗಿ, LT6(C) ಜಕಾತಿಯನ್ನು ಮುಂದುವರಿಸಿದೆ. ಈ ಜಕಾತಿಯು, LT ಹಾಗು HT ಎರಡೂ ವರ್ಗಗಳಿಗೆ ಅನ್ವಯವಾಗಲಿದೆ. **ವಿದ್ಯುತ್ ವಾಹನಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಪ್ರತಿ ಯೂನಿಟ್ಟಿಗೆ 5.00 ರೂಪಾಯಿಯ ಹಾಲಿ ಇರುವ ರಿಯಾಯಿತಿ ದರವನ್ನು ಮುಂದುವರಿಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ಬ್ಯಾಟರಿ ಸ್ವಾಪಿಂಗ್ ಇರುವಂತಹ ವಿದ್ಯುತ್ ವಾಹನಗಳಿಗೆ ಬಳಸುವ ಬ್ಯಾಟರಿಗಳನ್ನು ಚಾರ್ಜ್ ಮಾಡುವ ಘಟಕಗಳಿಗೂ ರಿಯಾಯಿತಿ ದರವನ್ನು ಆಯೋಗವು ವಿಸ್ತರಿಸಿದೆ.**

ಆರ್ಥಿಕ ವರ್ಷ 2021 ರ ವಿದ್ಯುತ್ ದರ ಆದೇಶ 2020 ರ ಪ್ರಮುಖ ಅಂಶಗಳು:

ಗೃಹಬಳಕೆ ಗ್ರಾಹಕರಿಗೆ ಅನ್ವಯವಾಗುವ ದರಗಳು:

ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ಪುರಸಭೆ ಪ್ರದೇಶಗಳಲ್ಲಿನ ಗೃಹ ಬಳಕೆ ಗ್ರಾಹಕರಿಗೆ ಹಾಗೂ ಸರ್ಕಾರಿ / ಧರ್ಮಾರ್ಥ ಸಂಸ್ಥೆಗಳು ನಡೆಸುವ ವಿದ್ಯಾ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ಸ್ಥಾವರಗಳ ದರಗಳಲ್ಲಿ ಮಾಡಿರುವ ಒಟ್ಟಾರೆ ಹೆಚ್ಚಳ ಪ್ರತಿ ಯೂನಿಟ್ಟಿಗೆ 25 ಪೈಸೆ. 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ. 3.75 ಅನ್ನು ರೂ.4.00 ಕ್ಕೆ ಏರಿಸಲಾಗಿದೆ ಮತ್ತು 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ. 5.20 ಅನ್ನು ರೂ.5.45 ಕ್ಕೆ ಏರಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ

ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.6.75 ಅನ್ನು ರೂ.7.00 ಕ್ಕೆ ಏರಿಸಲಾಗಿದೆ. 200 ಯೂನಿಟ್‌ಗಳಿಗೆ ಮೇಲ್ಪಟ್ಟ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.7.80 ಅನ್ನು ರೂ.8.05 ಕ್ಕೆ ನಿಗದಿಪಡಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಡಿಯ ಗ್ರಾಮೀಣ ಪ್ರದೇಶದ ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.3.65 ಅನ್ನು ರೂ.3.90 ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.4.90 ಅನ್ನು ರೂ.5.15 ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.45 ರಿಂದ ರೂ.6.70 ಕ್ಕೆ ಹೆಚ್ಚಿಸಲಾಗಿದೆ. 200 ಯೂನಿಟ್‌ಗಳಿಗೆ ಮೇಲ್ಪಟ್ಟ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.7.30 ಅನ್ನು ರೂ.7.55 ಕ್ಕೆ ನಿಗದಿಪಡಿಸಲಾಗಿದೆ.

ಇತರೆ ಎಲ್ಲಾ ಎಸ್ಕಾಂಗಳ ನಗರ ಪಾಲಿಕೆ ಹಾಗೂ ಪುರಸಭೆ ಪ್ರದೇಶಗಳಲ್ಲಿನ ಗೃಹ ಬಳಕೆಯ ಗ್ರಾಹಕರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.70 ಅನ್ನು ರೂ.3.95 ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.5.20 ಅನ್ನು ರೂ.5.45 ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.75 ರಿಂದ ರೂ.7.00 ಕ್ಕೆ ಹಾಗೂ 200 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.7.80 ರಿಂದ ರೂ.8.05 ಕ್ಕೆ ಹೆಚ್ಚಿಸಲಾಗಿದೆ.

ಇತರೆ ಎಲ್ಲಾ ಎಸ್ಕಾಂಗಳ ಗ್ರಾಮ ಪಂಚಾಯತಿಗಳ ಪ್ರದೇಶಗಳಲ್ಲಿನ ಗೃಹ ಬಳಕೆ ಗ್ರಾಹಕರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.60 ಅನ್ನು ರೂ.3.85 ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.4.90 ಅನ್ನು ರೂ.5.15 ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.45 ರಿಂದ ರೂ.6.70 ಕ್ಕೆ ಹಾಗೂ 200 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.7.30 ರಿಂದ ರೂ.7.55 ಕ್ಕೆ ಹೆಚ್ಚಿಸಲಾಗಿದೆ.

ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:

ರಾಜ್ಯದ ಎಲ್ಲಾ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿನ ಏರಿಕೆ ಪ್ರತಿಯೂನಿಟ್‌ಗೆ 25 ಪೈಸೆ ಇರುತ್ತದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ಪುರಸಭೆಗಳ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ, ಪರಿಷ್ಕೃತ ದರಗಳು ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.90 (ಈಗಿರುವ ದರ ರೂ.5.65) ಹಾಗೂ 500 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.20 (ಈಗಿರುವ ದರ ರೂ.6.95) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯ ಇತರ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಪರಿಷ್ಕೃತ ದರಗಳು ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.60 (ಈಗಿರುವ ದರ ರೂ.5.35), 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ.6.55 (ಈಗಿರುವ ದರ ರೂ.6.30) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.85 (ಈಗಿರುವ ದರ ರೂ.6.60) ಆಗುತ್ತದೆ.

ಇತರೆ ಎಸ್ಕಾಂಗಳ ವ್ಯಾಪ್ತಿಯ ಪುರಸಭೆ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರಗಳು–ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.70 (ಈಗಿರುವ ದರ ರೂ.5.45), 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ.6.70 (ಈಗಿರುವ ದರ ರೂ.6.45) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.00 (ಈಗಿರುವ ದರ ರೂ.6.75) ಆಗುತ್ತದೆ.

ಇತರೆ ಎಲ್ಲಾ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಹೊಸ ದರಗಳು– ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.60 (ಈಗಿರುವ ದರ ರೂ. 5.35), 501 ಯೂನಿಟ್‌ನಿಂದ 1000 ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ರೂ.6.55 (ಈಗಿರುವ ದರ ರೂ.6.30) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.85 (ಈಗಿರುವ ದರ ರೂ.6.60) ಆಗುತ್ತದೆ.

ರಾಜ್ಯದ ಎಲ್ಲಾ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿನ ಏರಿಕೆ ಪ್ರತಿ ಯೂನಿಟ್‌ಗೆ 25 ಪೈಸೆಗಳಷ್ಟು ಆಗಿರುತ್ತದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ಪುರಸಭೆ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಅನ್ವಯವಾಗುವ ಹೊಸ ದರ ಪ್ರತಿ ಯೂನಿಟ್‌ಗೆ ರೂ.7.35 (ಈಗಿರುವ ದರ ರೂ. 7.10) ಹಾಗೂ ಒಂದು ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.65 (ಈಗಿರುವ ದರ ರೂ.7.40) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯಲ್ಲಿನ ಉಳಿದ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.25 (ಈಗಿರುವ ದರ ರೂ.7.00) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.45 (ಈಗಿರುವ ದರ ರೂ.7.20) ಆಗುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.20 (ಈಗಿರುವ ದರ ರೂ.6.95) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.45 (ಈಗಿರುವ ದರ ರೂ.7.20) ಆಗುತ್ತದೆ.

ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:

ಎಲ್.ಟಿ. ವಾಣಿಜ್ಯ ಪ್ರವರ್ಗದ ಬಳಕೆದಾರರಿಗೆ ದರ ಏರಿಕೆ ಪ್ರತಿ ಯೂನಿಟ್‌ಗೆ 25 ಪೈಸೆ ಆಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೆ ಪುರಸಭೆ ಪ್ರದೇಶಗಳನ್ನು ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿನ ಹೊಸ ದರ, ಮೊದಲ 50 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.25 (ಈಗಿರುವ ದರ ರೂ.8.00) ಹಾಗೂ 50 ಯೂನಿಟ್‌ಗಳು ಮೀರಿದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.9.25 (ಈಗಿರುವ ದರ ರೂ.9.00) ಆಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿನ

ಹೊಸ ದರ, ಮೊದಲ 50 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.75 (ಈಗಿರುವ ದರ ರೂ.7.50) ಹಾಗೂ 50 ಯೂನಿಟ್‌ಗಳು ಮೀರಿದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.75 (ಈಗಿರುವ ದರ ರೂ.8.50) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 25ಪೈಸೆಗಳ ಏರಿಕೆಯಾಗಿರುತ್ತದೆ. ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.9.15 (ಈಗಿರುವ ದರ ರೂ.8.90) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.9.25 (ಈಗಿರುವ ದರ ರೂ. 9.00) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯ ಇತರೆ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 25 ಪೈಸೆಗಳ ಏರಿಕೆಯಾಗಿರುತ್ತದೆ. ಹೊಸ ದರ, ಮೊದಲ 2ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.95 (ಈಗಿರುವ ದರ ರೂ.8.70) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.9.05 (ಈಗಿರುವ ದರ ರೂ.8.80) ಆಗುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 25 ಪೈಸೆಗಳ ಏರಿಕೆಯಾಗಿರುತ್ತದೆ. ಹೊಸ ದರ, ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.90 (ಈಗಿರುವ ದರ ರೂ.8.65) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.9.00 (ಈಗಿರುವ ದರ ರೂ.8.75) ಆಗುತ್ತದೆ.

ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:

ಆಯೋಗವು ಕುಡಿಯುವ ನೀರು ಸರಬರಾಜು ಮಾಡುವ ಎಲ್.ಟಿ. ಸ್ಥಾವರಗಳಲ್ಲಿ ಬಳಸಲಾಗುವ ವಿದ್ಯುಚ್ಛಕ್ತಿಗೆ ದರವನ್ನು ಪ್ರತಿ ಯೂನಿಟ್‌ಗೆ ಈಗಿರುವ ರೂ.4.60 ರಿಂದ ರೂ.4.85ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 25 ಪೈಸೆಯಷ್ಟು ಏರಿಕೆ ಮಾಡಿರುತ್ತದೆ. ಹೆಚ್.ಟಿ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ಕೂಡ ಪ್ರತಿ ಯೂನಿಟ್‌ಗೆ ಈಗಿರುವ ದರವನ್ನು

ರೂ.5.20 ರಿಂದ ರೂ.5.45 ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 25 ಪೈಸೆಗಳ ಏರಿಕೆ ಮಾಡಿರುತ್ತದೆ.

ಎಲ್.ಇ.ಡಿ. / ಇಂಡಕ್ಷನ್ ಬೀದಿ ದೀಪಗಳಿಗೆ ರಿಯಾಯಿತಿ ವಿದ್ಯುತ್ ದರ:

ಆಯೋಗವು, ಬೀದಿದೀಪ ಸ್ಥಾವರಗಳಿಗೆ ಮಿತ ವಿದ್ಯುತ್ ಬಳಸುವ ಎಲ್.ಇ.ಡಿ. / ಇಂಡಕ್ಷನ್ ಬಲ್ಬ್‌ಗಳನ್ನು ಅಳವಡಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ, ಪ್ರತಿ ಯೂನಿಟ್‌ಗೆ ಈಗಿರುವ ಪ್ರೋತ್ಸಾಹ ದರವನ್ನು ಮುಂದುವರಿಸಿ, ಬಳಸಿದ ಪ್ರತಿ ಯೂನಿಟ್‌ಗೆ, ರಿಯಾಯಿತಿಯನ್ನು 105 ಪೈಸೆಗಳಿಗೆ ಏರಿಕೆ ಮಾಡಿದೆ. ಬೆ.ವಿ.ಸ.ಕಂ ನ ವ್ಯಾಪ್ತಿಯಲ್ಲಿ ರೂ.5.30 ರಿಂದ ರೂ.5.50 ಕ್ಕೆ, ಉಳಿದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವ್ಯಾಪ್ತಿಯಲ್ಲಿ ಈಗಿರುವ ದರವನ್ನು ರೂ.5.25 ರಿಂದ ರೂ.5.45 ಕ್ಕೆ ಪ್ರೋತ್ಸಾಹ ದರವನ್ನು ಪರಿಷ್ಕೃತಗೊಳಿಸಿದೆ. ಇತರೆ ಬೀದಿ ದೀಪ ಸ್ಥಾವರಗಳಿಗೆ ಅನ್ವಯವಾಗುವ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ಬೆ.ವಿ.ಸ.ಕಂ ನ ವ್ಯಾಪ್ತಿಯಲ್ಲಿ ರೂ.6.55 (ಈಗಿರುವ ದರ ರೂ.6.30), ಉಳಿದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್‌ಗೆ ರೂ.6.50 (ಈಗಿರುವ ದರ ರೂ.6.25) ಆಗುತ್ತದೆ.

ವಿದ್ಯಾ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು:

ಆಯೋಗವು, ಎಲ್.ಟಿ. ಪ್ರವರ್ಗದಡಿ ಬರುವ ಖಾಸಗಿ ವಿದ್ಯಾಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 25 ಪೈಸೆಗಳವರೆಗೆ ಹೆಚ್ಚಿಸಿದೆ. ಬೆಸ್ಕಾಂ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪುರಸಭೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿ, ಎಲ್.ಟಿ. ಪ್ರವರ್ಗದಡಿ ಪರಿಷ್ಕೃತ ದರ, ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.7.20 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.95) ಹಾಗೂ 200 ಯೂನಿಟ್‌ಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.45 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.8.20) ಅನ್ನು ನಿಗದಿಪಡಿಸಿರುತ್ತದೆ. ಇತರೆ ಎಲ್ಲಾ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.65 (ಈಗಿರುವ ದರ ಪ್ರತಿ

ಯೂನಿಟ್‌ಗೆ ರೂ.6.40) ಹಾಗೂ 200 ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.90 ದರ (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.65) ಅನ್ನು ನಿಗದಿಪಡಿಸಿರುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಪುರಸಭೆ ಹಾಗೂ ನಗರ ಸ್ಥಳಿಯ ಸಂಸ್ಥೆಗಳ ಪ್ರದೇಶಗಳಲ್ಲಿನ ಎಲ್.ಟಿ. ಪ್ರವರ್ಗಕ್ಕೆ ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.7.15 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.90) ಹಾಗೂ 200 ಯೂನಿಟ್‌ಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.40 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 8.15) ಅನ್ನು ನಿಗದಿಪಡಿಸಿರುತ್ತದೆ. ಇತರೆ ಎಲ್ಲಾ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.60 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.35) ಹಾಗೂ 200 ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.85 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.60) ಅನ್ನು ನಿಗದಿಪಡಿಸಿರುತ್ತದೆ.

ಹೆಚ್.ಟಿ. ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಬೆಸ್ಕಾಂ ವ್ಯಾಪ್ತಿಯಲ್ಲಿನ ಸರ್ಕಾರಿ ಆಸ್ಪತ್ರೆಗಳು ಮತ್ತು ಧರ್ಮಾರ್ಥ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳು ಮತ್ತು ಅನುದಾನಿತ ವಿದ್ಯಾ ಸಂಸ್ಥೆಗಳ ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಮಾಸಿಕ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.7.10 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.85) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.50 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.25) ಆಗುತ್ತದೆ. ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪ್ರದೇಶಗಳಲ್ಲಿ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.7.05 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.80) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.45 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.20) ಆಗುತ್ತದೆ.

ಹೆಚ್.ಟಿ ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಬೆಸ್ಕಾಂ ವ್ಯಾಪ್ತಿಯಲ್ಲಿನ ಖಾಸಗಿ ವಿದ್ಯಾ ಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.8.10 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.85) ಹಾಗೂ ಒಂದು ಲಕ್ಷಕ್ಕಿಂತ ಹೆಚ್ಚಿನ ಯೂನಿಟ್‌ಗಳ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.50 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.8.25) ಆಗುತ್ತದೆ. ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿ ಪ್ರದೇಶಗಳಲ್ಲಿ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.8.05 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.80) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.45 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.8.20) ಆಗುತ್ತದೆ.

ಹಸಿರು ದರ (Green Tariff):

ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುಚ್ಛಕ್ತಿಯ ಖರೀದಿ ಮತ್ತು ಉಪಯೋಗವನ್ನು ಉತ್ತೇಜಿಸಲು ಹೆಚ್.ಟಿ. ಕೈಗಾರಿಕೆ ಮತ್ತು ಹೆಚ್.ಟಿ. ವಾಣಿಜ್ಯ ಗ್ರಾಹಕರಿಗೆ ಅವರು ಇಚ್ಛಿಸಿದಲ್ಲಿ ಅವರಿಗೆ ಅನ್ವಯವಾಗುವ ದರಕ್ಕಿಂತ ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರೆಸಿದೆ.

ಸರ್ಕಾರದ ಸಹಾಯಧನ:

10 ಹೆಚ್.ಪಿ. ವರೆಗಿನ ಸಾಮರ್ಥ್ಯದ 31.65 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಹಾಗೂ 27.35 ಲಕ್ಷ ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ, ಉಚಿತ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ, 2019-20 ನೇ ಸಾಲಿಗೆ ಸರ್ಕಾರ ಕೊಡಬೇಕಾದ ಸಹಾಯಧನದ ಮೊತ್ತವಾದ ರೂ. 11,892.45 ಕೋಟಿಗಳ ಪ್ರತಿಯಾಗಿ 2020-21 ನೇ ಸಾಲಿನಲ್ಲಿ ಕೊಡಬೇಕಾದ ಅಂದಾಜು ಮೊತ್ತ ರೂ.12,911.38 ಕೋಟಿಗಳು. ಆರ್ಥಿಕ ವರ್ಷ 2021 ರಲ್ಲಿ ನೀರಾವರಿ ಪಂಪ್‌ಸೆಟ್‌ಗಳ ಅಂದಾಜು ಬಳಕೆ 21,614.36 ದಶಲಕ್ಷ ಯೂನಿಟ್‌ಗಳು (ಒಟ್ಟು ಬಳಕೆಯ ಶೇ.35 ರಷ್ಟು) ಮತ್ತು ಭಾಗ್ಯಜ್ಯೋತಿ / ಕುಟೀರಜ್ಯೋತಿ

ಗ್ರಾಹಕರ ಅಂದಾಜು ಬಳಕೆ 748.12 ದಶಲಕ್ಷ ಯೂನಿಟ್‌ಗಳು. (ಒಟ್ಟು ಸಹಾಯಧನಕ್ಕೆ ಸಂಬಂಧಿಸಿದ ವಿದ್ಯುತ್ ಬಳಕೆ 22362.48 ದಶಲಕ್ಷ ಯೂನಿಟ್‌ಗಳು).

ವಿದ್ಯುತ್ ಸರಬರಾಜು ಕಂಪನಿಗಳ 2020-21 ನೇ ಸಾಲಿನ ವಾರ್ಷಿಕ ಕಂದಾಯ ಬೇಡಿಕೆ (ARR): ಆಯೋಗವು, ಬಹು ವಾರ್ಷಿಕ ದರ ವಿನಿಯಾಮವಳಿಗಳ ತತ್ವಗಳನ್ನು ಆಧರಿಸಿ, ಆರ್ಥಿಕ ವರ್ಷ 2021ಕ್ಕೆ, ವಾರ್ಷಿಕ ಕಂದಾಯ ಬೇಡಿಕೆಯನ್ನು ಪರಿಷ್ಕರಿಸಿ, ನಿಗದಿಪಡಿಸಿರುತ್ತದೆ. ಹಾಗೂ ಆಯೋಗವು, ಎಲ್ಲಾ ವಿದ್ಯುತ್ ವಿತರಣಾ ಪರವಾನಗಿದಾರರ ಆರ್ಥಿಕ ವರ್ಷ 2019 ರ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಮಾಡಿದ್ದು, ಕೊರತೆಯನ್ನು, 2021ರ ಆರ್ಥಿಕ ವರ್ಷದ ವಾರ್ಷಿಕ ಕಂದಾಯ ಬೇಡಿಕೆಗೆ ಸೇರಿಸಲಾಗಿದೆ.

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ದರ ಪರಿಶೀಲನೆಗಾಗಿ ಸಲ್ಲಿಸಿದ್ದ ಅರ್ಜಿಗಳನ್ನು ಕೂಲಂಕುಷವಾಗಿ ಪರೀಶೀಲಿಸಿದ ನಂತರ ಆಯೋಗವು, 2020-21 ನೇ ಸಾಲಿಗೆ 62,101.73 ದಶಲಕ್ಷ ಯೂನಿಟ್‌ಗಳ (ಶೇ.3.039 ರಷ್ಟು ವಿದ್ಯುತ್ ಪ್ರಸರಣ ನಷ್ಟ ಮತ್ತು ಶೇ.12.27, ರಷ್ಟು ವಿದ್ಯುತ್ ವಿತರಣಾ ನಷ್ಟ ಹೊರತುಪಡಿಸಿದಂತೆ) ವಿದ್ಯುತ್ ಮಾರಾಟ ಮಾಡಲಿರುವ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒಟ್ಟು ರೂ.48,300.57 ಕೋಟಿಗಳ, ಒಟ್ಟಾರೆ ಖರ್ಚು (ವಾರ್ಷಿಕ ಕಂದಾಯ ಬೇಡಿಕೆ) ಅನ್ನು ಅನುಮೋದಿಸಿದೆ. ಇದಕ್ಕಾಗಿ ವಿದ್ಯುತ್ ಸರಬರಾಜು ಕಂಪನಿಗಳು ಆ.ವ 2021 ರ ಅವಧಿಯಲ್ಲಿ 73,104.34 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡಲಿವೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಆರ್ಥಿಕ ವರ್ಷ 2020-21 ಕ್ಕೆ ವಾರ್ಷಿಕ ಕಂದಾಯ ಬೇಡಿಕೆಯಾದ ರೂ. 24,371.86 ಕೋಟಿಗಳೊಂದಿಗೆ ರಾಜ್ಯದ ಒಟ್ಟು ವಿದ್ಯುಚ್ಛಕ್ತಿ ಖರೀದಿಯ ಶೇ.47.83 ರಷ್ಟು ಪ್ರಮಾಣದ 34,962.35 ದಶಲಕ್ಷ ಯೂನಿಟ್‌ಗಳ ವಿದ್ಯುತ್‌ನ್ನು ಖರೀದಿಸಲಿದೆ.

ಆರ್ಥಿಕ ವರ್ಷ 2021ಕ್ಕೆ ಆಯೋಗವು ಅನುಮೋದಿಸಿದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆ (ARR), ವಿದ್ಯುತ್ ಮಾರಾಟ ಪ್ರಮಾಣ, ವಿದ್ಯುತ್ ಖರೀದಿ ಪ್ರಮಾಣಗಳ ಸಾರಾಂಶವು ಕೆಳಕಂಡಂತೆ ಇರುತ್ತದೆ:

ಕ್ರ ಸಂ	ವಿಷಯ	FY21	Remarks
1	ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ (ARR) ಕೋಟಿ ರೂ. ಗಳಲ್ಲಿ (ಎಲ್ಲಾ ವಿ.ಸ.ಕಂ ಗಳಿಗೆ)	48,300.56	
2	ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ (ARR) ಕೋಟಿ ರೂ. ಗಳಲ್ಲಿ (HRECS ಗೆ)	168.23	
3	ಅನುಮೋದಿಸಿದ ವಿದ್ಯುತ್ ಮಾರಾಟ ಪ್ರಮಾಣ, ದಶ ಲಕ್ಷ ಯೂನಿಟ್ ಗಳಲ್ಲಿ (ಎಲ್ಲಾ ವಿ.ಸ.ಕಂ ಗಳಿಗೆ)	61,828.97	ಅನುಮೋದಿಸಿದ ಪ್ರಸರಣಾ ಹಾಗು ವಿತರಣಾ ನಷ್ಟವನ್ನು ಹೊರತುಪಡಿಸಿ.
4	ಅನುಮೋದಿಸಿದ ವಿದ್ಯುತ್ ಮಾರಾಟ ಪ್ರಮಾಣ, ದಶ ಲಕ್ಷ ಯೂನಿಟ್ ಗಳಲ್ಲಿ (HRECS ಗೆ)	272.76	ಅನುಮೋದಿಸಿದ ಪ್ರಸರಣಾ ಹಾಗು ವಿತರಣಾ ನಷ್ಟವನ್ನು ಹೊರತುಪಡಿಸಿ.
5	ಅನುಮೋದಿಸಿದ ಶೇ. ಪ್ರಸರಣಾ ನಷ್ಟ	3.039	
6	ಅನುಮೋದಿಸಿದ ಶೇ. ವಿತರಣಾ ನಷ್ಟ	12.27	
7	ಅನುಮೋದಿಸಿದ ವಿದ್ಯುತ್ ಖರೀದಿ ಪ್ರಮಾಣ, ದಶ ಲಕ್ಷ ಯೂನಿಟ್ ಗಳಲ್ಲಿ	73,104.34	FY20 – 70,905.56 ದಶ ಲಕ್ಷ ಯೂನಿಟ್

ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು, ವಿದ್ಯುತ್ ಖರೀದಿ ವೆಚ್ಚದಲ್ಲಿ ಒಟ್ಟಾರೆ ಏರಿಕೆ ಮತ್ತು ಕಾರ್ಯಾಚರಣೆ ವೆಚ್ಚಗಳಲ್ಲಿ ಏರಿಕೆ ಉಲ್ಲೇಖಿಸಿ, ಆರ್ಥಿಕ ವರ್ಷ 2019ರ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಮತ್ತು 2020-21 ನೇ ಸಾಲಿಗೆ ಪರಿಷ್ಕೃತ ವಿದ್ಯುತ್ ದರಗಳ ಪ್ರಸ್ತಾವನೆಗಳೊಂದಿಗೆ, ಆರ್ಥಿಕ ವರ್ಷ 2020-21 ರ ವಾರ್ಷಿಕ ಕಂದಾಯ ಪರಿಷ್ಕರಣೆಗೆ, ಆಯೋಗದ ಮುಂದೆ ಅರ್ಜಿಗಳನ್ನು ಸಲ್ಲಿಸಿದ್ದವು. 2020-21 ನೇ ಸಾಲಿಗೆ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ

ಬೇಡಿಕೆ (ARR) (ಆರ್ಥಿಕ ವರ್ಷ 2019 ರ ಮುಂದೊಯ್ದ ಕೊರತೆಯನ್ನು ಸೇರಿದಂತೆ), ಈ ಕೆಳಕಂಡಂತೆ ಇವೆ:

2020-21 ನೇ ಸಾಲಿನ, ವಿದ್ಯುತ್ ಸರಬರಾಜು ಕಂಪನಿವಾರು, ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ

(ರೂ. ಕೋಟಿಗಳಲ್ಲಿ)

ವಿದ್ಯುತ್ ಸರಬರಾಜು ಪರವಾನಿಗೆದಾರ	FY21	
	ಸಲ್ಲಿಸಿದಂತೆ	ಅನುಮೋದಿಸಿದಂತೆ
ಬೆ.ವಿ.ಸ.ಕಂ	29,141.07	24,371.86
ಮ.ವಿ.ಸ.ಕಂ	4,251.43	4,011.33
ಚಾ.ವಿ.ಸ.ನಿ.ನಿ	5,183.92	4,821.23
ಹು.ವಿ.ಸ.ಕಂ	9,954.62	9,382.86
ಗು.ವಿ.ಸ.ಕಂ	5,984.70	5,713.28
ಹುಕ್ಕೇರಿ ಆರ್.ಇ.ಸಿ.ಎಸ್	263.72	168.23
ಒಟ್ಟು	**54,779.46**	**48,468.79**

ಆರ್ಥಿಕ ವರ್ಷ 2021 ರ ಕಂದಾಯ ಕೊರತೆ:

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ವರ್ಷ 2019 ರ ವಾರ್ಷಿಕ ಕಾರ್ಯ ನಿರ್ವಹಣಾ ಪುನರ್ಮನನದಲ್ಲಿ ರೂ. 1,837.16 ಕೋಟಿ ಕಂದಾಯ ಕೊರತೆಯನ್ನು ಆಯೋಗವು ನಿರ್ಧರಿಸಿದೆ. ಸದರಿ ಕಂದಾಯ ಕೊರತೆಯೊಂದಿಗೆ ಆರ್ಥಿಕ ವರ್ಷ 2021 ಕ್ಕೆ ಅಂದಾಜಿಸಿದ ಕಂದಾಯ ಕೊರತೆ / ಹೆಚ್ಚಳ ರೂ.636.00 ಕೋಟಿಗಳನ್ನು ಗಣನೆಗೆ ತೆಗೆದುಕೊಂಡ ನಂತರ ಒಟ್ಟಾರೆ ಕೊರತೆ ರೂ.2,473.16 ಕೋಟಿಯಾಗಿದ್ದು, ಅದನ್ನು ಆರ್ಥಿಕ ವರ್ಷ 2021 ರಲ್ಲಿ ದರ ಹೆಚ್ಚಳದಿಂದ ವಸೂಲು ಮಾಡಬೇಕಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆ.ಪಿ.ಟಿ.ಸಿ.ಎಲ್) 2020-21 ರ ವಿದ್ಯುತ್ ಪ್ರಸರಣ ದರ:

ಆಯೋಗವು ಆರ್ಥಿಕ ವರ್ಷ 2019 ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನದ ಅನುಸಾರ ಮುಂದೊಯ್ದ ರೂ.436.71 ಕೋಟಿ ಕೊರತೆಯನ್ನು ಸೇರಿಸಿಕೊಂಡು, ಆರ್ಥಿಕ ವರ್ಷ 2021 ನೇ ಸಾಲಿಗೆ ರೂ.4,292.87 ಕೋಟಿಗಳ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ. ಆ.ವ. 2006–07ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನದ ಅನುಸಾರ ಕೊರತೆಯಾದ 72.90 ಕೋಟಿ ರೂಪಾಯಿಗಳನ್ನು ಆರ್ಥಿಕ ವರ್ಷ 2021ರ ವಾರ್ಷಿಕ ಕಂದಾಯ ಬೇಡಿಕೆಯಲ್ಲಿ (ARR) ಯಲ್ಲಿ ಪರಿಗಣಿಸಿಲಾಗಿದೆ. ದಿನಾಂಕ 05.10.2020 ರ ಮಾನ್ಯ ವಿದ್ಯುಚ್ಛಕ್ತಿ ನ್ಯಾಯಮಂಡಳಿಯ ಆದೇಶದ ಪ್ರಕಾರ ನಿರ್ಧರಿಸಿರುವ ಮೊತ್ತವನ್ನು ಮುಂದಿನ ಐದು ವರ್ಷಗಳ ಅವಧಿಯಲ್ಲಿ ನಿಯಂತ್ರಕ ಸ್ವತ್ತಿನ ಮೂಲಕ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವಲ್ಲಿ ಆರ್ಥಿಕ ವರ್ಷ 2020–21ನೇ ಸಾಲಿನಲ್ಲಿ 138.09 ಕೋಟಿ ರೂಪಾಯಿಗಳನ್ನು ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ಪರಿಗಣಿಸಲಾಗಿದೆ.

2019 ರ ದರ ಆದೇಶ ದಲ್ಲಿ 2019-20 ರ ಸಾಲಿಗೆ ಆಯೋಗವು ಅನುಮೋದಿಸಿದ್ದ, ಕ.ವಿ.ಪ್ರ.ನಿ.ನಿ.ಕ್ಕೆ ಪಾವತಿಸಬೇಕಾದ ಪ್ರಸರಣ ದರವಾದ ರೂ.1,33,644.00 (ಪ್ರತಿ ಮೆ.ವ್ಯಾ. / ತಿಂಗಳಿಗೆ) ಮತ್ತು 2020–21 ರ ಸಾಲಿಗೆ ರೂ.1,31,711.00 (ಪ್ರತಿ ಮೆ.ವ್ಯಾ. / ತಿಂಗಳಿಗೆ) ಗಳ ಪ್ರತಿಯಾಗಿ, ಪ್ರಸರಣ ದರವನ್ನು ಪರಿಷ್ಕರಿಸಿ, ಆರ್ಥಿಕ ವರ್ಷ 2020-21 ಕ್ಕೆ, ಪ್ರತಿ ಮೆ.ವ್ಯಾ. / ತಿಂಗಳಿಗೆ ರೂ.1,55,114 ಅನ್ನು ನಿಗದಿಪಡಿಸಿದೆ. ಆರ್ಥಿಕ ವರ್ಷ 2020-21 ರ ಈ ಪರಿಷ್ಕೃತ ಪ್ರಸರಣ ದರ ವನ್ನು, ವಿದ್ಯುತ್ ಕಂಪನಿಗಳಿಗೆ ಅನುಮೋದಿಸಿದ ವಿದ್ಯುತ್ ಖರೀದಿ ವೆಚ್ಚದೊಂದಿಗೆ ಸೇರಿಸಿಕೊಂಡು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ, ವಿದ್ಯುತ್ ದರ ಪರಿಷ್ಕರಣೆಯನ್ನು ಅನುಮೋದಿಸಿದೆ.

ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ (MSEZL) ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧಾರಣೆ:

ಆಯೋಗವು, ಆರ್ಥಿಕ ವರ್ಷ 2021 ಕ್ಕೆ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ (MSEZL) 52.19 ಕೋಟಿ ರೂಪಾಯಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.7.20 ರಂತೆ ಪರಿಷ್ಕೃತ ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

ಏಕಸ್ ವಿಶೇಷ ಆರ್ಥಿಕ ವಲಯಕ್ಕೆ (AEQUS SEZ) ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧಾರಣೆ:

ಆಯೋಗವು, ಆರ್ಥಿಕ ವರ್ಷ 2021 ಕ್ಕೆ, ಏಕಸ್ (AEQUS SEZ) ವಿಶೇಷ ಆರ್ಥಿಕ ವಲಯಕ್ಕೆ 23.66 ಕೋಟಿ ರೂಪಾಯಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಏಕಸ್ (AEQUS) ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.7.25 ರಂತೆ ಪರಿಷ್ಕೃತ ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

*****

ಟಿಪ್ಪಣಿ: ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಲಗತ್ತಿಸಿದೆ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಮಂಗಳೂರು ವಿಶೇಷ ಆರ್ಥಿಕ ವಲಯ ಮತ್ತು ಏಕಸ್ (AEQUS) ವಿಶೇಷ ಆರ್ಥಿಕ ವಲಯ (SEZ) ಗಳಿಗೆ ಸಂಬಂಧಿಸಿದ ದರ ಪರಿಷ್ಕರಣ ಆದೇಶಗಳ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್ *www.karunadu.karnataka.gov.in/kerc* ನಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 157 ಎನ್‌ಎಲ್‌ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ: 08/12/20.

80

4/8 3/12/2020

ಇಂದ :

ಸರ್ಕಾರದ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್ತು~~,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ / ~~ಪರಿಷತ್ತಿನ~~ ಸದಸ್ಯರಾದ ಶ್ರೀ / ~~ಶ್ರೀಮತಿ~~ ಶಿವಣ್ಣ. ಹೆಚ್. ಡಿ. ಇವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 286 ಕ್ಕೆ ಉತ್ತರಗಳನ್ನು ಸಲ್ಲಿಸುವ ಬಗ್ಗೆ.
ಪ 313

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ / ~~ಪರಿಷತ್ತಿನ~~ ಸದಸ್ಯರಾದ ಶ್ರೀ / ~~ಶ್ರೀಮತಿ~~ ಶಿವಣ್ಣ ಹೆಚ್. ಡಿ. ಮತ್ತು ಶ್ರೀ. ಕುಮಾರ ಸ್ವಾಮಿ. ಹೆಚ್. ಕೆ. ಇವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 286 ಪ 313 ಕ್ಕೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ಅದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
V. Geeth
ಶಾಖಾಧಿಕಾರಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 286 & 313
2. ಸದಸ್ಯರ ಹೆಸರು : ಶ್ರೀ ಹೆಚ್.ಡಿ.ರೇವಣ್ಣ ; ಮತ್ತು ಶ್ರೀ ಕುಮಾರಸ್ವಾಮಿ ಹೆಚ್.ಕೆ.
3. ಉತ್ತರಿಸಬೇಕಾದ ದಿನಾಂಕ : 08-12-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018-19 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ, ಸಕಲೇಶಪುರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳು ಅನುಮೋದನೆಗಾಗಿ ವಿವಿಧ ಹಂತದಲ್ಲಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು.
ಆ	ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ ಸಕಲೇಶಪುರ, ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳ ಅನುಮೋದನೆಗಾಗಿ ವಿವಿಧ ಹಂತದಲ್ಲಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿದ್ದು ಸರ್ಕಾರ ಕಾಮಗಾರಿ ಮುಂದುವರೆಸಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆರವರಿಗೆ ನಿರ್ದೇಶನ ನೀಡಿರುವುದು ನಿಜವೇ; ಅವುಗಳನ್ನು ಮುಂದುವರೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ, ಸಕಲೇಶಪುರ, ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳನ್ನು ಮುಂದುವರೆಸುವ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿ ಎಂದು ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆರವರಿಗೆ ಸೂಚಿಸಿರುತ್ತಾರೆ. ಅದರಂತೆ, ಹೇಮಾವತಿ ಯೋಜನೆ ಅಡಿಯಲ್ಲಿ ಬರುವ ಹೊಳೆನರಸೀಪುರ, ಸಕಲೇಶಪುರ ಮತ್ತು ಅರಕಲಗೂಡು ವಿಧಾನ ಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿರುವ ಒಟ್ಟು 738 ಸಂಖ್ಯೆಯ ರೂ.348.45 ಕೋಟಿ ಮೊತ್ತದ Non-Grounded (Under Tender process) ಕಾಮಗಾರಿಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.
ಇ	ಮೇಲ್ಕಂಡ ತಡೆಹಿಡಿದಿರುವ ಕಾಮಗಾರಿಗಳ ಬಗ್ಗೆ ಕಾವೇರಿ ನೀರಾವರಿ ನಿಗಮದಿಂದ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿರುವುದು ನಿಜವೆ; ಹಾಗಿದ್ದಲ್ಲಿ, ತಡೆಹಿಡಿದಿರುವ ಟೆಂಡರ್ ನೋಟಿಫಿಕೇಷನ್‌ಗಳಲ್ಲಿನ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು. (ಪೂರ್ಣ ವಿವರ ನೀಡುವುದು).	

ಸಂಖ್ಯೆ:ಜಸಂಇ 157 ಎನ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಹೆಚ್‌ಡಿ 184 ಪಿಆರ್‌ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 08/12/2020

ಇವರಿಂದ :
ಸರ್ಕಾರದ ಕಾರ್ಯದರ್ಶಿಗಳು(ಪಿಸಿಎಎಸ್),
ಒಳಾಡಳಿತ ಇಲಾಖೆ,
ವಿಧಾನ ಸೌಧ,
ಬೆಂಗಳೂರು.

112
ಎ
8/12/2020

ಇವರಿಗೆ :
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯಃ ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆಃ 287ಕ್ಕೆ ಉತ್ತರಿಸುವ ಬಗ್ಗೆ.

******

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆಃ 287ಕ್ಕೆ ಸಂಬಂಧಿಸಿದಂತೆ ಉತ್ತರದ 30 ಪ್ರತಿಗಳನ್ನು ಈ ಪತ್ರದೊಡನೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

8/12/2020

(ಎಸ್. ಸುರೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಸೆರೆಮನೆ & ಸಿನಿಮಾ ಹಾಗೂ ಪೊಲೀಸ್ ಸಹಾಯಕ ಸೇವೆಗಳು).

8/12

ಪ್ರತಿಯನ್ನು ಮಾಹಿತಿಗಾಗಿಃ-

1. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು (ಪಿಸಿಎಎಸ್), ಇವರ ಹಿರಿಯ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿಗಳು (ಅಪರಾಧಗಳು ಹಾಗೂ ಸೆರೆಮನೆ & ಸಿನಿಮಾ), ಇವರ ಆಪ್ತ ಸಹಾಯಕರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	287
ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸಿಪುರ)
ಉತ್ತರಿಸುವ ದಿನಾಂಕ	:	8/12/2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯ ಮಂತ್ರಿಯವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಹಾಸನ ನಗರದಲ್ಲಿ ಸುಮಾರು 100 ವರ್ಷಗಳಷ್ಟು ಹಳೆಯದಾದ ಬಂದೀಖಾನೆ ಇದ್ದು, ಈ ಬಂದೀಖಾನೆ ಬದಲಿಗೆ ಹಾಸನ ನಗರದ ಹೊರವಲಯದ ಗಾಡೇನ ಹಳ್ಳಿ ಗ್ರಾಮದ ಸರ್ವೆ ನಂ. 488 ರಲ್ಲಿ ಹೊಸದಾಗಿ ಬಂದೀಖಾನೆ ನಿರ್ಮಿಸಲು 40 ಎಕರೆ ಜಮೀನನ್ನು ಮಂಜೂರು ಮಾಡಿರುವುದು ಹಾಗೂ ಗಾಡೇನಹಳ್ಳಿ ಸರ್ವೆ ನಂ. 488 ರಲ್ಲಿ ಹೊಸದಾಗಿ ಬಂದೀಖಾನೆ ನಿರ್ಮಿಸಲು 40 ಎಕರೆ ಜಾಗವು ಬಂದೀಖಾನೆಯ ಇಲಾಖೆ ವಶದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:315ಕ್ಕೆ ಸಂಬಂಧಿಸಿದಂತೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

7/12/2020
(ಶ್ರೀನಿವಾಸ.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-1&3)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	315
ಸದಸ್ಯರ ಹೆಸರು :	ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)
ಉತ್ತರಿಸಬೇಕಾದ ದಿನಾಂಕ:	08-12-2020
ಉತ್ತರಿಸಬೇಕಾದ ಸಚಿವರ ಹೆಸರು :	ಮಾನ್ಯ ಕಂದಾಯ ಸಚಿವರು

	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ಭೂಸ್ವಾಧೀನಾಧಿಕಾರಿಗಳ ಕಛೇರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಯಿಂದ ಕಳೆದ 03 ವರ್ಷಗಳಲ್ಲಿ ನೀರಾವರಿ ಇಲಾಖೆಯಲ್ಲಿ ಯೋಜನಾವಾರು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡ ಎಷ್ಟು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಹೆಚ್ಚಿನ ಪರಿಹಾರ ಕೋರಿ ದಾವೆ ಹೂಡಲಾಗಿದೆ. (ಸಂಪೂರ್ಣ ಮಾಹಿತಿ ನೀಡುವುದು);	ಭೂಸ್ವಾಧೀನ ಕಾಯ್ದೆ 2013ರ ಕಲಂ 64 ರಡಿ ಹೆಚ್ಚುವರಿ ಪರಿಹಾರ ಕೋರಿ ಯಗಚಿ ಯೋಜನೆಯಲ್ಲಿ 64 ಹಾಗೂ ರೈಲ್ವೆ ಯೋಜನೆಯಲ್ಲಿ 8 ಹೀಗೆ ಒಟ್ಟು 72 ಪ್ರಕರಣಗಳು ದಾಖಲಾಗಿರುತ್ತವೆ. ಸದರಿ 72 ಪ್ರಕರಣಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 05 ಅರ್‌ಇಹೆಚ್ 2014 (ಪಿ-3) ದಿನಾಂಕ: 10.01.2017 ರಲ್ಲಿ ಭೂಸ್ವಾಧೀನ ಕಾಯ್ದೆ 2013ರ ಕಲಂ 52 ರನ್ವಯ ಪ್ರತಿ ಜಿಲ್ಲೆಗೆ ಒಬ್ಬರಂತೆ ಜಿಲ್ಲಾ ನ್ಯಾಯಾಧೀಶರನ್ನು ಪೀಠಾಸೀನಾಧಿಕಾರಿಯನ್ನಾಗಿ ನೇಮಿಸಿ ರಚಿಸಲಾಗಿರುವ ಪ್ರಾಧಿಕಾರಕ್ಕೆ ವಹಿಸಲಾಗಿದೆ.
ಆ)	ಈ ಪ್ರಕರಣಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯಗಳು ಭೂ-ಸ್ವಾಧೀನಾಧಿಕಾರಿ ನಿಗದಿಪಡಿಸಿದ ಪರಿಹಾರಕ್ಕಿಂತ 10 ರಿಂದ 100 ಪಟ್ಟಗೂ ಹೆಚ್ಚಿನ ಪರಿಹಾರವನ್ನು ನಿಗದಿಗೊಳಿಸಿ ಆದೇಶ ಹೊರಡಿಸಿರುವುದು ಕಾನೂನು ಇಲಾಖೆಯ ಗಮನಕ್ಕೆ ಬಂದಿದೆಯೇ ?	ಪ್ರಾಧಿಕಾರಕ್ಕೆ ವಹಿಸಲಾದ ಎಲ್ ಎ ಸಿ ಪ್ರಕರಣಗಳಲ್ಲಿ ಇದುವರೆಗೆ ಯಾವುದೇ ಅಂತಿಮ ಆದೇಶವಾಗಿರುವುದಿಲ್ಲ.
ಇ)	ಇಂತಹ ಎಷ್ಟು ಪ್ರಕರಣಗಳಲ್ಲಿ ಭೂ-ಸ್ವಾಧೀನಾಧಿಕಾರಿಗಳು ಸಿವಿಲ್ ನ್ಯಾಯಾಲಯವು ನಿಗದಿಪಡಿಸಿರುವ ಪರಿಹಾರ ನ್ಯಾಯಸಮ್ಮತವಲ್ಲವೆಂದು ಅಭಿಪ್ರಾಯಪಟ್ಟು ಮಾನ್ಯ ಉಚ್ಚ ನ್ಯಾಯಾಲಯಗಳಲ್ಲಿ ಮೇಲ್ಮನವಿ ಸಲ್ಲಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ;	ಹೊಸ ಭೂಸ್ವಾಧೀನ ಕಾಯ್ದೆ 2013 ರ ಕಲಂ 64 ರಂತೆ ಪ್ರಾಧಿಕಾರದಲ್ಲಿ ದಾಖಲಾದ ಎಲ್‌ಎಸಿ ಪ್ರಕರಣಗಳಲ್ಲಿ ಇದುವರೆಗೆ ಯಾವುದೇ ಆದೇಶವಾಗಿರುವುದಿಲ್ಲ. ಆದ್ದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ .
ಈ)	ಇಂತಹ ಎಷ್ಟು ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಗಳನ್ನು ಸಲ್ಲಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಮೇಲ್ಮನವಿಗಳನ್ನು ಸಲ್ಲಿಸುವುದು ಸೂಕ್ತವಲ್ಲವೆಂದು ಕಾನೂನು ಇಲಾಖೆ ಅಭಿಪ್ರಾಯ ನೀಡಿದೆ (ಸಂಪೂರ್ಣ ಮಾಹಿತಿ ನೀಡುವುದು);	ಅನ್ವಯಿಸುವುದಿಲ್ಲ

ಉ)	ಮೇಲ್ಮನವಿಗಳನ್ನು ಸಲ್ಲಿಸದಿದ್ದಲ್ಲಿ, ಎಷ್ಟು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದ ಆದೇಶದಂತೆ ಪರಿಹಾರ ನೀಡಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);	ಪ್ರಶ್ನೆ ಉದ್ಭವಿಸುವುದಿಲ್ಲ.
ಊ)	ಕೆಲವೊಂದು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣಾ ಸಮಯದಲ್ಲಿ ಸರ್ಕಾರಿ ವಕೀಲರು ತಮ್ಮ ಕರ್ತವ್ಯವನ್ನು ಕಾನೂನು ರೀತಿಯಲ್ಲಿ ನಿರ್ವಹಿಸದೆ ಸಿವಿಲ್ ನ್ಯಾಯಾಲಯದಿಂದ ಹೆಚ್ಚಿನ ಪರಿಹಾರಕ್ಕೆ ಆದೇಶ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಶ್ನೆ ಉದ್ಭವಿಸುವುದಿಲ್ಲ.
ಋ)	ಇಂತಹ ಪ್ರಕರಣಗಳಲ್ಲಿ ಹಾಸನ ಜಿಲ್ಲಾಧಿಕಾರಿಗಳು, ಸರ್ಕಾರಿ ವಕೀಲರುಗಳು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸದೆ ಸರ್ಕಾರದ ಬೊಕ್ಕಸಕ್ಕೆ ಅಪಾರ ಹಾನಿ ಮಾಡಿರುವುದಾಗಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ. ಕಂಇ 29 ಭೂಸ್ವಾಹಾ 2020

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 199 ಪಿಪಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:07.12.2020

US
29
8/12/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಇಂಧನ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 316 ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 316 ಕ್ಕೆ ಉತ್ತರಗಳ 25 ಪ್ರತಿಗಳನ್ನು ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

N. mangalagowri

(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	316
ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	08.12.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪರಿವರ್ತಕಗಳ (ಟಿಸಿ) ಸಂಖ್ಯೆ ಎಷ್ಟು (ಸಾಮರ್ಥ್ಯವಾರು ವಿವರ ನೀಡುವುದು);</td><td>ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಸಾಮರ್ಥ್ಯದ ಒಟ್ಟು 4666 ಸಂಖ್ಯೆಯ ಪರಿವರ್ತಕಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರಗಳು ಈ ಕೆಳಕಂಡಂತಿವೆ:
<table>
<tr><th>ಕ್ರ.ಸಂ.</th><th>ಸಾಮರ್ಥ್ಯ</th><th>ಸಂಖ್ಯೆ</th></tr>
<tr><td>1</td><td>25 ಕೆ.ವಿ.ಎ</td><td>2830</td></tr>
<tr><td>2</td><td>63 ಕೆ.ವಿ.ಎ</td><td>1650</td></tr>
<tr><td>3</td><td>100 ಕೆ.ವಿ.ಎ</td><td>170</td></tr>
<tr><td>4</td><td>250 ಕೆ.ವಿ.ಎ</td><td>16</td></tr>
<tr><td colspan="2">ಒಟ್ಟು</td><td>4666</td></tr>
</table></td></tr>
<tr><td>ಆ)</td><td>ಈ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪರಿವರ್ತಕ (ಟಿಸಿ) ದುರಸ್ತಿ ಕೇಂದ್ರಗಳಿವೆ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪರಿವರ್ತಕ (ಟಿಸಿ) ಗಳನ್ನು ದುರಸ್ತಿ ಮಾಡಲಾಗಿದೆ.</td><td>ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಪರಿವರ್ತಕಗಳ ದುರಸ್ತಿ ಕೇಂದ್ರವು ಕಾರ್ಯನಿರ್ವಹಿಸುತ್ತಿದ್ದು, ಸದರಿ ದುರಸ್ತಿ ಕೇಂದ್ರದಲ್ಲಿ ಕಳೆದ 3 ವರ್ಷಗಳಲ್ಲಿ ಒಟ್ಟು 2794 ಪರಿವರ್ತಕಗಳನ್ನು ದುರಸ್ತಿಗೊಳಿಸಲಾಗಿದ್ದು, ಅವುಗಳ ವಿವರಗಳು ಕೆಳಕಂಡಂತಿವೆ:
<table>
<tr><th>ಸಾಮರ್ಥ್ಯ</th><th>2017-18</th><th>2018-19</th><th>2019-20</th><th>2020-21 (ನವೆಂಬರ್ - 20ವರೆಗೆ)</th></tr>
<tr><td>25 ಕೆವಿಎ</td><td>223</td><td>295</td><td>432</td><td>240</td></tr>
<tr><td>63 ಕೆವಿಎ</td><td>226</td><td>386</td><td>429</td><td>235</td></tr>
<tr><td>100 ಕೆವಿಎ</td><td>78</td><td>86</td><td>84</td><td>67</td></tr>
<tr><td>250 ಕೆವಿಎ</td><td>4</td><td>8</td><td>1</td><td>0</td></tr>
<tr><td>ಒಟ್ಟು</td><td>531</td><td>775</td><td>946</td><td>542</td></tr>
</table></td></tr>
<tr><td>ಇ)</td><td>ಪರಿವರ್ತಕ (ಟಿಸಿ) ದುರಸ್ತಿ ಕೇಂದ್ರಗಳಲ್ಲಿನ ಗುತ್ತಿಗೆದಾರರು ಸರಿಯಾಗಿ ಕರ್ತವ್ಯ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೈತರು ಹಾಗೂ ಗ್ರಾಹಕರಿಗೆ ಪರ್ಯಾಯ ಮಾರ್ಗವೇನು?</td><td>ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಟೆಸ್ಟ್ ಬೆಂಚ್ ನಲ್ಲಿ ದುರಸ್ಥಿದಾರರು ರಿಪೇರಿ ಮಾಡಲಾದ ಪರಿವರ್ತಕಗಳನ್ನು ಡಿ.ಟಿ.ಆರ್. ಉಪವಿಭಾಗದವರಿಂದ (Distribution Transformer Repair Center) ಪರಿಶೀಲಿಸಿದ ನಂತರವೇ ಉಪಯೋಗಿಸಲಾಗುತ್ತಿದೆ.</td></tr>
</table>

		ಇತ್ತೀಚೆಗೆ ಪದೇಪದೇ ವಿಫಲವಾಗುತ್ತಿದ್ದ ಪರಿವರ್ತಕಗಳನ್ನು ಡಿ.ಟಿ.ಆರ್. ಉಪ ವಿಭಾಗ ರವರಿಂದ ಪುನರ್ ಪರಿಶೀಲಿಸಲಾಗಿ, ಸದರಿ ಪರಿವರ್ತಕಗಳು ಅಧಿಕ ಹೊರೆಯಿಂದಾಗಿ ವಿಫಲಗೊಂಡಿರುವುದು ಕಂಡು ಬಂದಿರುತ್ತದೆ. ಸದರಿ ಪರಿವರ್ತಕಗಳ ಅಧಿಕ ಹೊರೆಯು ಅನಧಿಕೃತ ನೀರಾವರಿ ಪಂಪುಸೆಟ್ಟುಗಳಿಂದಾಗಿ ಉಂಟಾಗಿದ್ದು, ಪ್ರಸ್ತುತ, ಇದನ್ನು ಸರಿಪಡಿಸಿ ಪರಿವರ್ತಕಗಳನ್ನು ಅಳವಡಿಸಲಾಗಿರುತ್ತದೆ. ವಿಫಲಗೊಂಡ ಪರಿವರ್ತಕಗಳನ್ನು ಕೆ.ಇ.ಆರ್.ಸಿ. ನಿಯಮಾನುಸಾರ ನಿಗದಿತ ಅವಧಿಯೊಳಗೆ ಬದಲಾಯಿಸಲಾಗುತ್ತಿದೆ. ದುರಸ್ಥಿಗೊಳಿಸಿದ ಪರಿವರ್ತಕಗಳು ಗ್ಯಾರಂಟಿ ಅವಧಿಯೊಳಗೆ ವಿಫಲಗೊಂಡಲ್ಲಿ ದುರಸ್ಥಿದಾರರು ಅವರದೇ ವೆಚ್ಚದಲ್ಲಿ ದುರಸ್ಥಿ ಮಾಡಿಕೊಡಬೇಕಾಗಿದ್ದು, ಹೀಗೆ ವಿಫಲಗೊಂಡಿರುವ ಪರಿವರ್ತಕಗಳ ಪ್ರಮಾಣ ಶೇಕಡ 4ಕ್ಕಿಂತ ಹೆಚ್ಚಾದಲ್ಲಿ ಟೆಂಡರ್ ನಿಯಮಾನುಸಾರ ಹಾಗೂ ಕಂಪನಿ ನಿಯಮಾನುಸಾರ ಸದರಿಯವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 199 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ - ಇಬಿಬಿ /123 / 2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 08.12.2020.

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

U S
30
8/12/20

ಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಶೋಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 317ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಶೋಕ್ ಕೆ.ಬಿ (ಶಿವಮೊಗ್ಗ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 317ರ 25 ಉತ್ತರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 08/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 317
ಉತ್ತರಿಸಬೇಕಾದ ದಿನಾಂಕ : 08/12/2020
ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ನೊಂದಾಯಿತ ಯುವಕ ಮತ್ತು ಯುವತಿಯರ ಸಂಘಗಳಿವೆ (ತಾಲ್ಲೂಕುವಾರು, ಸಂಘವಾರು ಮಾಹಿತಿ ನೀಡುವುದು);	ಶಿವಮೊಗ್ಗ ಜಿಲ್ಲೆಯ 07 ತಾಲ್ಲೂಕಿನಲ್ಲಿ ಒಟ್ಟು 147 ಯುವಕ ಮತ್ತು ಯುವತಿ ಮಂಡಳಿಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೊಂದಾವಣೆಗೊಂಡಿದ್ದು, ಅವುಗಳ ತಾಲ್ಲೂಕುವಾರು, ಸಂಘವಾರು ಪಟ್ಟಿಯನ್ನು **ಅನುಬಂಧ -1** ರಲ್ಲಿ ಒದಗಿಸಿದೆ.
ಆ.	ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಎಷ್ಟು ನೋಂದಾಯಿತ ತರಬೇತುದಾರರಿದ್ದಾರೆ (ತಾಲ್ಲೂಕುವಾರು, ಕ್ರೀಡಾವಾರು ಸಂಪೂರ್ಣ ವಿವರ ನೀಡುವುದು);	ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಸ್ತುತ ಕರ್ನಾಟಕ ಕ್ರೀಡಾ ಪ್ರಾಧಿಕಾರದ ವತಿಯಿಂದ ಕ್ರಿಕೆಟ್ ಕ್ರೀಡೆಗೆ ಸಂಬಂಧಿಸಿದಂತೆ ಒಬ್ಬ ತರಬೇತುದಾರರನ್ನು ನಿಯೋಜಿಸಲಾಗಿದೆ. ಇದನ್ನು ಹೊರತುಪಡಿಸಿ ಯಾವುದೇ ರೀತಿಯ ನೋಂದಾಯಿತ ತರಬೇತುದಾರರು ಇರುವುದಿಲ್ಲ.
ಇ.	ಶಿವಮೊಗ್ಗ ಜಿಲ್ಲೆಯಲ್ಲಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ನೋಂದಾಯಿತ ಯುವಕ / ಯುವತಿ ಸಂಘಗಳಿಗೆ ಇಲಾಖೆ ವತಿಯಿಂದ ನೀಡಿದ ಪ್ರೋತ್ಸಾಹ ಧನವೆಷ್ಟು ಹಾಗೂ ಕ್ರೀಡಾ ಉಪಕರಣಗಳಾವುವು (ಸಂಘವಾರು, ಕ್ರೀಡಾವಾರು ಮಾಹಿತಿ ನೀಡುವುದು)?	ಶಿವಮೊಗ್ಗ ಜಿಲ್ಲೆಯಲ್ಲಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ನೋಂದಾಯಿತ ಯುವಕ / ಯುವತಿ ಸಂಘಗಳಿಗೆ ರಾಜ್ಯ ವಲಯದಿಂದ ರೂ. 27500/- ಮೌಲ್ಯದ ಕ್ರೀಡಾ ಉಪಕರಣಗಳನ್ನು ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ರೂ. 20,000/- ಕ್ರೀಡಾ ಉಪಕರಣಗಳಾದ ವಾಲಿಬಾಲ್, ಫುಟ್ಬಾಲ್, ಬ್ಯಾಸ್ಕೆಟ್‌ಬಾಲ್, ಥ್ರೋಬಾಲ್, ಕೇರಂ ಬೋರ್ಡ್, ಅಬಿಲಿಟಿ ಲಾಡರ್, ಸ್ಕಿಪಿಂಗ್ ರೋಪ್ ಹಾಗೂ ಇನ್ನಿತರೆ ಉಪಕರಣಗಳನ್ನು

			ನೀಡಲಾಗಿರುತ್ತದೆ. ಪ್ರಸ್ತುತ, ಯಾವುದೇ ಪ್ರೋತ್ಸಾಹಧನ ನೀಡಲು ಅವಕಾಶವಿರುವುದಿಲ್ಲ. ಕ್ರೀಡಾ ಪರಿಕರಗಳನ್ನು ನೀಡಲಾದ ಸಂಘಗಳ ಪಟ್ಟಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ವೈಎಸ್‌ಡಿ 123 ಇಬಿಬಿ 2020

ಬಿಎಸ್

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

ಅನುಬಂಧ-1

1. ಶಿವಮೊಗ್ಗ ತಾಲ್ಲೂಕು

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಕಿತ್ತೂರು ರಾಣಿ ಚೆನ್ನಮ್ಮ ಯುವತಿ ಮಂಡಳಿ, ಹರಮಘಟ್ಟ	ಹರಮಘಟ್ಟ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
2.	ಮಾತೃ ಶ್ರೀ ಯುವತಿ ಮಂಡಳಿ,	ಹರಮಘಟ್ಟ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
3.	ರಂಗನಾಥ ಗ್ರಾಮೀಣ ಕ್ರೀಡಾ ಯುವಕ ಸಂಘ	ಅಬ್ಬಲಗೆರೆ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
4.	ಪಾರ್ವತಿ ಗ್ರಾಮೀಣ ಯುವತಿ ಮಂಡಳಿ	ಅಬ್ಬಲಗೆರೆ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
5.	ಶ್ರೀ ಮೂಖಾಂಬಿಕ ಮಹಿಳಾ ಮಂಡಳಿ,	ಕೊಮ್ಮನಾಳ್ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
6.	ಶ್ರೀ ಓಂ. ಕನ್ನಡ ಯುವಕ ಸಂಘ,	ಮತ್ತೋಡು, ಅಬ್ಬಲಗೆರೆ ಅಂಚೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
7.	ಶುಭಮಂಗಳ ಯುವತಿ ಮಂಡಳಿ,	ಕೊಮ್ಮನಾಳ್ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
8.	ಬಸವೇಶ್ವರ ಗ್ರಾಮೀಣ ಕ್ರೀಡಾ ಯುವಕ ಸಂಘ	ಕೊಮ್ಮನಾಳ್ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
9.	ಕಿತ್ತೂರು ರಾಣಿ ಯೂತ್ ಕ್ಲಬ್ (ಎಸ್.ಸಿ)	ನಂಜಪ್ಪ ಲೇಔಟ್, ಸಹ್ಯಾದ್ರಿ ಕಾಲೇಜ್ ಹಿಂಬಾಗ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
10.	ಪಾರ್ವತಿ ಗ್ರಾಮೀಣ ಕ್ರೀಡಾ ಯುವತಿ ಮಂಡಳಿ,	ಮತ್ತೋಡು, ಅಬ್ಬಲಗೆರೆ ಅಂಚೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
11.	ಶ್ರೀ ಮಾತಂಗದೇವಿ ಯುವಕರ ಸಂಘ. (ಎಸ್.ಸಿ)	ತ್ಯಾಜವಳ್ಳಿ, ಗ್ರಾಮ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
12.	ಶ್ರೀ ಮಾತಂಗದೇವಿ ಯುವತಿ/ಮಹಿಳಾ ಸಂಘ. (ಎಸ್.ಸಿ)	ತ್ಯಾಜವಳ್ಳಿ, ಗ್ರಾಮ, ಹಾರನಹಳ್ಳಿ ಹೋಬಳಿ, ಶಿವಮೊಗ್ಗ ಜಿಲ್ಲೆ
13.	ಶ್ರೀ ಸೇವಾಲಾಲ್ ಯುವಕರ ಸೇವಾ ಸಂಘ,	ಶಿವಪುರ ತಾಂಡ, ದುಮ್ಮಳ್ಳಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
14.	ನಂಜಪ್ಪ ಬಡಾವಣೆ ಯುವಕರ ಸಂಘ	ನಂಜಪ್ಪ ಲೇ ಔಟ್, ಸಹ್ಯಾದ್ರಿ ಕಾಲೇಜು ಹಿಂಭಾಗ, ಶಿವಮೊಗ್ಗ
15.	ಶಿವಮೊಗ್ಗ ಯೂತ್ ಕ್ರಿಕೆಟ್ ಕ್ಲಬ್	ಜ್ಯೋತಿರಾವ್ ಬೀದಿ, ವಿದ್ಯಾನಗರ, ಶಿವಮೊಗ್ಗ
16.	ಕರ್ನಾಟಕ ಬಣಜಾರ್ (ಎಸ್.ಸಿ) ಕ್ಷೇಮಾಭಿವೃದ್ಧಿ ಯುವ ಸೇನೆ	ಬೀರನಕೆರೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ
17.	ಸಹ್ಯಾದ್ರಿ ಹಾಕಿ ಕ್ಲಬ್	ಜಯನಗರ, 3ನೇ ಕ್ರಾಸ್, ಶಿವಮೊಗ್ಗ
18.	ಇಂಚರ ಯುವಕ ಸಂಘಪುರದಾಳ್,	ಪುರದಾಳ್, ಶಿವಮೊಗ್ಗ ಜಿಲ್ಲೆ
19.	ಸನ್‌ಶೈನ್ ಯೂತ್ ಕ್ಲಬ್	ನಂಜಪ್ಪ ಲೇಔಟ್, ಶಿವಮೊಗ

20.	ಜಾಗೃತಿ ಯುವಕ ಸಂಘ (ರಿ)	ಹುಣಸೋಡು, ಶಿವಮೊಗ್ಗ ತಾ||
21.	ಅರುಣೋದಯ ಯುವಕ ಸಂಘ,	ಕೊರಗಿ, ಕುಂಸಿ ಹೋಬಳಿ, ಶಿವಮೊಗ್ಗ ತಾ||
22.	ಶ್ರೀ ನಂದಿ ಬಸವೇಶ್ವರ ಯುವಕ ಸಂಘ	ಮೇಲಿನಹನಸ ವಾಡಿ, ಶಿವಮೊಗ್ಗ ತಾ||
23.	ಡಾ||ಬಿ.ಆರ್.ಅಂಬೇಡ್ಕರ್ ಯುವಕ ಸಂಘ	ಬೇಡರಹೊಸಹಳ್ಳಿ, ಶಿವಮೊಗ್ಗ ತಾ||
24.	ಶ್ರೀ ದುರ್ಗಾಂಬಿಕ ಯುವಕ ಸಂಘ	ಕಾಚಿನಕಟ್ಟೆ, ಶಿವಮೊಗ್ಗ ತಾ||
25.	ಶ್ರೀ ಮಾರುತಿ ಯುವಕ ಸಂಘ,	ಶೆಟ್ಟಿಹಳ್ಳಿ ಶಿವಮೊಗ್ಗ ತಾ||
26.	ಸರ್ವೋದಯ ಸ್ಪೋರ್ಟ್ಸ್ ಕ್ಲಬ್	ಹೊಳೆಬೆಳಗಲು ಶಿವಮೊಗ್ಗ ತಾ||
27.	ಪ್ರಿಯಾಂಕ ಲೇ ಔಟ್ ಯುವಕ ಸಂಘ	ಪ್ರಿಯಾಂಕ ಲೇ ಔಟ್, ಮತ್ತೂರು ರಸ್ತೆ, ಶಿವಮೊಗ್ಗ
28.	ಶ್ರೀ ಸಿಂಗಂದೂರೇಶ್ವರಿ ಮಹಿಳಾ ಸಂಘ,	ಬಸವನಗುಡಿ, 3ನೇ ಕ್ರಾಸ್ ಶಿವಮೊಗ್ಗ ತಾ||
29.	ಶ್ರೀ ಸಾಯಿ ದೀಪ ಕಲಾ ವೃಂದ	ಸ್ವಾಮಿ ವಿವೇಕಾನಂದ ಶಾಲೆ ಎದುರು ರಾಜೇಂದ್ರನಗರ, ಶಿವಮೊಗ್ಗ
30.	ಶ್ರೀ ಅಜೇಯ ಯುವಕ ಸಂಘ	ಹಸೂಡಿ ಪೋಸ್ಟ್, ಶಿವಮೊಗ್ಗ ತಾ||
31.	ಶ್ರೀ ಮೈಲಾರೇಶ್ವರ ಯುವಕ ಸಂಘ	ಕಾಟೀಕೆರೆ, ಶಿವಮೊಗ್ಗ ತಾ||
32.	ಮೌರ್ಯ ಕೇಸರಿ ಪಡೆ ಯುವಕ ಸಂಘ	ಭಂಡಾರಿ ಕ್ಯಾಂಪ್, ಸಂತೆಕಡೂರು, ಶಿವಮೊಗ್ಗ
33.	ಪ್ರಗತಿಪರ ಯುವಕರ ಕ್ರೀಡಾ ಸಂಘ	ಚಿಕ್ಕ ಮಾರಡಿ ಗ್ರಾಮ ಅಸೂಡಿ ಅಂಚೆ ಶಿವಮೊಗ್ಗ ತಾ.
34.	ಶ್ರೀ ಮಾರಿಯಮ್ಮ ಕ್ರೀಡಾ ಸಂಘ	ಹೊಳೆ ಬೆನವಳ್ಳಿ ಅಂಚೆ
35.	ವಿಘ್ನೇಶ್ವರ ಯುವಕ ಕ್ರೀಡಾ ಸಂಘ	ಅಸೂಡಿ ಫಾರಂ ಅಸೂಡಿ ಅಂಚೆ
36.	ಶ್ರೀ ವಿನಾಯಕ ಯುವಕ ಸಂಘ	ಜ್ಯೋತಿ ನಗರ ಕಾಚಿನ ಕಟ್ಟೆ
37.	ಶ್ರೀ ಸಂಗೊಳ್ಳಿ ರಾಯಣ್ಣ ಯುವಕ ಸಂಘ	ಕಂಟೀಕೆರೆ ಶಿವಮೊಗ್ಗ ತಾ/
38.	ಮಹರ್ಷಿ ವಾಲ್ಮೀಕಿ ಬೇಡರಕಣ್ಣಪ್ಪ ಮಹಿಳಾ ಸಂಘ	ಬೇಡರ ಹೊಸಹಳ್ಳಿ ಶಿವಮೊಗ್ಗ ತಾ
39.	ಚಂದನ ಯುವತಿ ಮಂಡಳಿ	ಹೊಳೆಹಟ್ಟಿ ಶಿವಮೊಗ್ಗ ತಾ
40.	ನಿಸರ್ಗ ಯುವತಿ ಮಂಡಳಿ	ರತ್ನಗಿರಿ ನಗರ ಅಬ್ಬಲಗೆರೆ ಶಿವಮೊಗ್ಗ
41.	ಅಮೂಲ್ಯ ಯುವಕ ಸಂಘ	ಲಕ್ಕಿನಕೊಪ್ಪ ಬಿ. ಕೊರಲಹಳ್ಳಿ ನಿಧಿಗೆ ಶಿವಮೊಗ್ಗ
42.	ಶ್ರೀ ಮಂಜುನಾಥೇಶ್ವರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ)	ಬ. ಬೀರನಹಳ್ಳಿ ಶಿವಮೊಗ್ಗ
43.	ಶುಭಮಂಗಳ ಯುವತಿ ಮಂಡಳಿ	ವೀರನ ಬೆನವಳಿ ಶಿವಮೊಗ್ಗ

44.	ಶ್ರೀ ಕಂಚಾಂಬಿಕ ಯುವಕ ಸಂಘ	ಸಂತೆ ಕಡೂರು ಶಿವಮೊಗ್ಗ ತಾ
45.	ವೀರಾಂಜನೇಯ ಯುವಕ ಸಂಘ	ಸೋಗಾನೆ ಶಿವಮೊಗ್ಗ ತಾ
46.	ಶ್ರೀ ಸೇವಾಲಾಲ್ ಯುವಕರ ಗ್ರಾಮಾಭಿವೃದ್ಧಿ ಸಂಘ	ಹುಣಸೋಡು ಶಿವಮೊಗ್ಗ ತಾ
47.	ಶ್ರೀ ಮಾತಂಗಮ್ಮ ಯುವಕರ ಸಂಘ	ಸಂತೆ ಕಡೂರು ಶಿವಮೊಗ್ಗ
48.	ಶಿವಮೊಗ್ಗ ಜಿಲ್ಲಾ ಯುವ ಬ್ಯಾಡ್ಮಿಂಟನ್ ಸಂಸ್ಥೆ	ಪೆನ್ಶನ್ ಮೊಹಲ್ಲಾ ಶಿವಮೊಗ್ಗ
49.	ಶ್ರೀ ಬಸವೇಶ್ವರ ಯುವಕರ ಸಂಘ	ಬೆಳಲಕಟ್ಟೆ ಶಿವಮೊಗ್ಗ
50.	ಸಿದ್ಧಿವಿನಾಯಕ ಕ್ರೀಡಾ ಸಂಘ	ಶಿವಪ್ಪ ನಾಯಕ ಬಡಾವಣೆ ಕಲ್ಲಹಳ್ಳಿ
51.	ಶಿವಮೊಗ್ಗ ಜಿಲ್ಲಾ ವಾಡೋ ಕರಾಟೆ ಸಂಘ	ಶಿವಮೊಗ್ಗ ವಿದ್ಯಾ ಭವನ ಡಿ.ಡಿ.ಪಿ ಐ ಆಫೀಸ್ ಕಂಪೌಡ್ ಕಾನ್ವೆಂಟ್ ರಸ್ತೆ ಶಿವಮೊಗ್ಗ
52.	ಎ.ಜೆಡ್ ಉಮೆನ್ಸ್ ಫಿಟ್ನೆಸ್ ಕ್ಲಬ್	ನವಲೆ ವಿನಾಯಕ ನಗರ ಸವಳಂಗ ರಸ್ತೆ ಶಿವಮೊಗ್ಗ
53.	ರೇಣುಕಾಂಬ ವಿವಿದ್ದೋದ್ದೇಶ ಸೇವಾ ಮತ್ತು ಕ್ರೀಡಾ ಸಂಘ	ಭದ್ರಾಪುರ ಕೂಡ್ಲಿ ಅಂಚೆ ಶಿವಮೊಗ್ಗ ತಾ
54.	ಕುಂಚೇನಹಳ್ಳಿ ಬಣಜಾರ್ (ಎಸ್‌ಸಿ) ಕ್ಷೇಮಾಭಿವೃದ್ಧಿ ಯುವಕರ ಸಂಘ	ಕುಂಚೇನ ಹಳ್ಳಿ ಅಂಚೆ ಶಿವಮೊಗ್ಗ ತಾ
55.	ಶ್ರೀ ವಿನಾಯಕ ಯುವಕರ ಸಂಘ	ಹಾರೆಕಟ್ಟೆ ಸೋಗಾನೆ ಅಂಚೆ
56.	ಸೃಸ್ಟಿ ಮಹಿಳಾ ಸಂಘ	ಯಲವಟ್ಟಿ ನಿಧಿಗೆ ಹೋಬಳಿ ಹಸೋಡಿ ಶಿವಮೊಗ್ಗ ತಾ
57.	ಡಿಸ್ಟ್ರಿಕ್ಟ್ ಮಾರ್ಷಲ್ ಆರ್ಟ್ಸ್ ಸ್ಪೋರ್ಟ್ಸ್ ಕ್ಲಬ್	ಶಿವಮೊಗ್ಗ
58.	ಕುಂಚೇನಹಳ್ಳಿ ಬಣಜಾರ (ಎಸ್ ಸಿ) ಕ್ಷೇಮಾಭಿವೃದ್ಧಿ ಯುವಕರ ಸಂಘ	ಕುಂಚೇನಹಳ್ಳಿ ಮೇಲಿನ ತಾಂಡ ಹೊಳಲೂರು ಶಿವಮೊಗ್ಗ
59.	ಶ್ರೀ ಸೇವಾಲಾಲ್ ಯುವಕರ ಸಂಘ	ಕೋಟೆ ಗಂಗೂರು
60.	ಅಕ್ಷರ ಯುವಕರ ಸಂಘ	ಚನ್ನ ಮುಂಬಾಪುರ ಜೆ.ಎನ್ .ಎನ್ .ಸಿ ಕಾಲೇಜ್ ಎದುರು ಸವಳಂಗ ರಸ್ತೆ
61.	ಶ್ರೀ ಸೇವಾಲಾಲ್ ಬಣಜಾರ್ ಸೇವಾ ಸಮಿತಿ (ರಿ)	ನಿದಿಗೆ ಗ್ರಾಮ ಶಿವಮೊಗ್ಗ
62.	ಸಮನ್ವಯ ಸಮೃದ್ಧಿ ಯುವಕರ ಸಂಘ	ಗೋಪಾಳ 2 ನೇ ಕ್ರಾಸ್ ಶಿವಮೊಗ್ಗ
63.	ಶ್ರೀ ರಾಮಾಂಜನೇಯ ಯುವಕ ಸಂಘ	ಸೋಮಿನಕೊಪ್ಪ ಶಿವಮೊಗ್ಗ
64.	ಬಸವೇಶ್ವರ ಯುವಕರ ಸಂಘ	ಮಂಡಘಟ್ಟ ಶಿವಮೊಗ್ಗ ತಾ
65.	ಸೌಹಾರ್ದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ	ಸ್ವಾಮಿ ವಿವೇಕಾನಂದ ಬಡಾವಣೆ
66.	ಶ್ರೀ ದುರ್ಗಾಂಭಿಕೆ ಯುವತಿ ಮಂಡಳಿ	ಸೋಮಿನಕೊಪ್ಪ ಶಿವಮೊಗ್ಗ ತಾ
67.	ಕುವೆಂಪು ಕ್ಷೇಮಾಭಿವೃದ್ಧಿ ಸೇವಾ ಸಂಘ	ಚಾಲುಕ್ಯ ನಗರ ಕೆ.ಹೆಚ್.ಬಿ ಕಾಲೋನಿ ಶಿವಮೊಗ್ಗ
68.	ಶ್ರೀ ಪಾರ್ವತಿ ಪರಮೇಶ್ವರ ವೀರಗಾಸೆ ಕಲಾಸಂಘ	ಯಲವಟ್ಟಿ ಹಸೂಡಿ ಅಂಚೆ ಶಿವಮೊಗ್ಗ

69.	ಸನ್ಮಿತ್ರ ಕ್ರೀಡಾ ಕೇಂದ್ರ	ಹೊಸಹಳ್ಳಿ ಶಿವಮೊಗ್ಗ ತಾ
70.	ಡಾ. ಬಿ ಆರ್ ಅಂಬೇಡ್ಕರ್ ಯುವಕರ ಸಂಘ (ಎಸ್.ಸಿ)	ದುಮ್ಮಳ್ಳಿ ಸಿದ್ದೇಶ್ವರ ನಗರ ಶಿವಮೊಗ್ಗ ತಾ
71.	ಶ್ರೀ ಸೇವಾಲಾಲ್ ಯುವಕರ ಸೇವಾ ಸಂಘ (ಎಸ್.ಸಿ)	2 ನೇ ತಿರುವು 3 ನೇ ಹಂತ ಆದರ್ಶ ಕಾಲೋನಿ ವಿನೋಬ ನಗರ ಶಿವಮೊಗ್ಗ
72.	ಪ್ರೇರಣ ಯುವಕರ ಸಂಘ	ದುರ್ಗಿಗುಡಿ, ಶಿವಮೊಗ್ಗ

2. ತೀರ್ಥಹಳ್ಳಿ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಪ್ರತಿಭಾ ವಿಕಾಸ ಯುವಕ ಸಂಘ	ಹಾದಿಗಲ್ಲು, ತೀರ್ಥಹಳ್ಳಿ ತಾ||
2.	ಪ್ರಜ್ವಲ ಯುವಕ ಸಂಘ	ಕಲ್ಲುಕೊಪ್ಪ, ಸಿರಿಗೆರೆ ಪೋಸ್ಟ್ ತೀರ್ಥಹಳ್ಳಿ ತಾ||

3. ಸೊರಬ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಬಾಲಾಜಿ ಕಲಾ ಬಳಗ	ಆನವಟ್ಟಿ, ಸೊರಬ ತಾ||
2.	ಶ್ರೀ ಜಟೇಶ್ವರ ಯುವಕ ಸಂಘ	ಕೋಣನಮನೆ, ಹೆಚ್ಚೆ, ಚಂದ್ರಗುತ್ತಿ, ಸೊರಬ ತಾ||
3.	ರತ್ನಾಶ್ರೀ ಭಜನಾ ಮಂಡಳಿ	ಬನದಕೊಪ್ಪ, ನಿಸರಾಣಿ, ಉಳವಿ, ಸೊರಬ ತಾ||
4.	ಶ್ರೀ ಶಿವಶಕ್ತಿ ಯುವಕ ಸಂಘ	ಬಂದಿಗೆ ಮೂಟಗುಪ್ಪೆ, ಚಂದ್ರುಗುತ್ತಿ ಸೊರಬ ತಾ||
5.	ಗುರುಕೃಪಾ ಶ್ರೀ ಗುರು ಪಂಡಿತ ಪುಟ್ಟರಾಜ ಸಂಗೀತ ಪಾಠಶಾಲೆ	ಸೊರಬ ತಾ||
6.	ಶ್ರೀ ಕಾಳಿಕಾಂಬ ಯುವಕ ಸಂಘ	ಹೆಚ್ಚೆ, ಚಂದ್ರುಗುತ್ತಿ ಸೊರಬ ತಾ||
7.	ಚೈತನ್ಯ ಯುವಕ ಸಂಘ	ಹೊಳೆಜೋಳದ ಗುಡ್ಡೆ, ಚಂದ್ರುಗುತ್ತಿ ಸೊರಬ ತಾ||
8.	ಚಿರಂಜೀವಿ ಯುವಕ ಸಂಘ	ಚನ್ನಪಟ್ಟಣ ಚಂದ್ರುಗುತ್ತಿ ಸೊರಬ ತಾ||
9.	ಬಸವೇಶ್ವರ ಯುವಕ ಸಂಘ	ಉಳವಿ ಸೊರಬ ತಾ||
10.	ಶ್ರೀ ಬಸವೇಶ್ವರ ಕಲಾ ಸಂಘ	ಕಂತನಹಳ್ಳಿ, ಗುಡುವಿ ಸೊರಬ ತಾ||

11.	ಶ್ರೀ ಚೌಡೇಶ್ವರಿ ಯುವಕ ಸಂಘ	ಶಿವಪುರ ಚಂದ್ರುಗುತ್ತಿ ಸೊರಬ ತಾ||
12.	ಶ್ರೀ ವೀರಭದ್ರೇಶ್ವರ ಯುವಕ ಸಂಘ	ಕಣ್ಣೂರು ಉಳವಿ ಸೊರಬ ತಾ||
13.	ಶ್ರೀ ಅಮೃತಲಿಂಗೇಶ್ವರ ಯುವಕ ಸಂಘ	ಚತ್ರದಹಳ್ಳಿ, ಬಿಳವಾಣಿ ಸೊರಬ ತಾ||
14.	ಶ್ರೀ ಬಸವೇಶ್ವರ ಯುವತಿ ಮಂಡಳಿ	ಸಂಬಾಪುರ, ಬೆನ್ನೂರು ಗ್ರಾ.ಪಂ ಚಂದ್ರುಗುತ್ತಿ ಸೊರಬ ತಾ||
15.	ಶ್ರೀ ವೀರಭದ್ರೇಶ್ವರ ಯುವಕ ಸಂಘ	ಕಾನಹಳ್ಳಿ, ಉಳವಿ ಸೊರಬ ತಾ||
16.	ಶ್ರೀ ಮಾರಿಕಾಂಬ ಯುವಕ ಸಂಘ	ಹರಿಶಿ-ಮಂಗಳೂರು, ಚಂದ್ರುಗುತ್ತಿ ಸೊರಬ ತಾ||
17.	ಅರುಣೋದಯ ಯುವಕ ಸಂಘ	ಬೆನ್ನೂರು ಗ್ರಾ.ಪಂ ಚಂದ್ರುಗುತ್ತಿ ಸೊರಬ ತಾ||
18.	ಶ್ರೀ ಬಸವೇಶ್ವರ ಯುವಕ ಸಂಘ (ರಿ)	ಕಾಸ್ವಾಡಿಕೊಪ್ಪ, ಮಾವಲಿ, ಸೊರಬ ತಾ||
19.	ಶ್ರೀ ಹವಾಂಬಿಕ ಕಲಾ ಮತ್ತು ಕ್ರೀಡಾ ಯುವಕ ಸಂಘ,	ಶಿಗ್ಗಾ, ಉಳವಿ,
20.	ಶ್ರೀ ಮಾರುತಿ ಯುವಕ ಸಂಘ	ಬೆನ್ನೂರು ಗ್ರಾ.ಪಂ ಚಂದ್ರುಗುತ್ತಿ ಸೊರಬ ತಾ||
21.	ಶ್ರೀ ಚೌಡೇಶ್ವರಿ ಯುವತಿ ಮಂಡಳಿ,	ಚಂದ್ರುಗುತ್ತಿ ಸೊರಬ ತಾ|| ಶಿವಮೊಗ್ಗ
22.	ಸುಂಟ್ರಹಳ್ಳಿ, ಹರಿಶಿ, ಚಂದ್ರುಗುತ್ತಿ, ಸೊರಬ ತಾ||	ಸುಂಟ್ರಹಳ್ಳಿ, ಹರಿಶಿ, ಚಂದ್ರುಗುತ್ತಿ, ಸೊರಬ ತಾ|| ಶಿವಮೊಗ್ಗ
23.	ಶ್ರೀ ಮಾರುತಿ ಭಜನಾ ಸಂಘ	ಕುಂಸಿ, ಬಿಳವಾಣಿ, ಸೊರಬ ತಾ|| ಶಿವಮೊಗ್ಗ
24.	ಶ್ರೀ ಆಂಜನೇಯ ಯುವಕ ಸಂಘ	ಗುಂಜನೂರು, ಹೆಚ್ಚೆ, ಸೊರಬ ತಾ|| ಶಿವಮೊಗ್ಗ
25.	ಶ್ರೀ ಬಸವೇಶ್ವರ ಯುವಕ ಸಂಘ,	ತಳೇಬೈಲು, ಶಿಗ್ಗ ಉಳವಿ, ಸೊರಬ ತಾ|| ಶಿವಮೊಗ್ಗ
26.	ಸರ್ವಸಿದ್ಧಿ ವಿನಾಯಕ ಯುವಕ ಸಂಘ	ಕೊಲ್ಲುಣಸಿ ಬಿಳವಾಣಿ ಸೊರಬ ತಾ|| ಶಿವಮೊಗ್ಗ

4. **ಸಾಗರ ತಾಲ್ಲೂಕು :**

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ನವೋಧಯ ಗ್ರಾಮೀಣಾಭಿವೃಧ್ಧಿ ಯುವಕ ಸಂಘ,	ಬೇದರಕೊಪ್ಪ, ಬ್ರಾಹ್ಮಣಕೆಪ್ಪಿಗೆ, ಸಾಗರ ತಾ||
2.	ಸಮೃದ್ಧಿ ಯುವ ಬಳಗ	ಬ್ಯಾಕೋಡು, ಸಾಗರ ತಾ||
3.	ಶ್ರೀ ಮಂಜುನಾಥ ಸ್ವಾಮಿ ರೈತ ಯುವಕ ಸಂಘ	ಕಲ್ಲೊಡಿ ಚೆನ್ನಗೊಂಡ ಗ್ರಾಮ ಕರೂರು ಹೋಬಳಿ ಸಾಗರ ತಾ||
4.	ಮೊಳಗು ಮಹಿಳಾ ಕಲಾ ತಂಡ	ಹೆಗ್ಗೋಡು, ಸಾಗರ ತಾ||
5.	ಶ್ರೀ ಮಹಾಗಣಪತಿ ಯುವಕ ಸಂಘ	ಮತ್ತಿಕರೆ, ಸಾಗರ ತಾ||
6.	ಪ್ರಕೃತಿ ಯುವಕ ಸಂಘ	ಲಾವಿಗೆರೆ, ಸಾಗರ ತಾ||
7.	ಭುವನೇಶ್ವರಿ ಯವತಿ ಮಂಡ	ಮತ್ತಿಕರೆ, ಸಾಗರ ತಾ||
8.	ಬನಶಂಕರಿ ಯುವತಿ ಮಂಡಳಿ	ಹುತ್ತಾ ದಿಂಬ, ನೀಚಡಿ, ಸಾಗರ ತಾ||
9.	ಗ್ರಾಮಲಿಂಗೇಶ್ವರ ಯುವಕ ಸಂಘ	ಹುತ್ತಾ ದಿಂಬ, ನೀಚಡಿ, ಸಾಗರ ತಾ||
10.	ಕನ್ನಡ ಯುವ ಸೇನೆ,	ಕಣ್ಣೂರು, ಆನಂದಪುರ ಸಾಗರ ತಾ||
11.	ಸಾಗರ ಯೂತ್ ಫೋರ್ಸ್ ಅಸೋಸಿಯೇಷನ್	ಸಾಗರ
12.	ನಾವು ನಿಮ್ಮವರ ಅಂಬೇಡ್ಕರ ಸಂಘ	ಬಿ.ಕೆ.ರಸ್ತೆ, ಗಾಂಧಿನಗರ, ಸಾಗರ ತಾ||
13.	ಯುವ ನಕ್ಷತ್ರ ಸಂಘ	ಅಶೋಕ ರಸ್ತೆ, ಆನಂದಪುರ
14.	ರಂಗೋಲಿ ಸಾಂಸ್ಕøತಿಕ ಕಲಾ ಮತ್ತು ಕ್ರೀಡಾ ಯುವತಿ ಸಂಘ	ತುಮರಿ, ಸಾಗರ ತಾ||
15.	ನವಚೇತನ ಯುವಕ ಸಂಘ,	ತ್ಯಾಗರ್ತಿ, ಸಾಗರ ತಾ||
16.	ಡಾ||ಅಂಬೇಡ್ಕರ್ ಕೋಲಾಟ ಕಲಾ ಬಳಗ	ಬಂದಗದ್ದೆ, ಕೆಳದಿ ಸಾಗರ ತಾ||

5. ಹೊಸನಗರ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಶ್ರೀಸರ್ವಸಿದ್ಧಿ ವಿನಾಯಕ ಸಾಂಸ್ಕೃತಿಕ ಕಲಾ ಯುವತಿ ಮಂಡಳಿ	ಜಿ.ಎಸ್ ರಸ್ತೆ, ರಿಪ್ಪನಪೇಟೆ, ಬರುವೆ, ಹೊಸನಗರ ತಾ||
2.	ಜೀರಿಗೆ ಮನೆ ಫ್ರೆಂಡ್ಸ್ ಕ್ಲಬ್ (ರಿ)	ಜೀರಿಗೆ ಮನೆ, ಹೊಸನಗರ ತಾ||
3.	ಶ್ರೀ ಸಿದ್ಧಿವಿನಾಯಕ ಯುವಕ ಸಂಘ (ರಿ)	ಕಾರಣಗಿರಿ, ಹೊಸನಗರ ತಾ||
4.	ಯುವ ಸ್ಪಂದನ ಸೇವಾ ಸಂಸ್ಥೆ (ರಿ)	ಕುಸುಗುಂಡಿ, ಕೊಡೂರು ಅಂಚೆ ಹೊಸನಗರ ತಾ||
5.	ಯುವಕರ ಸಂಘ, ಶಿವಪುರ	ಹುಳಿಗದ್ದೆ, ಅಮೃತಪುರ ಗ್ರಾ.ಪಂ, ಹೊಸನಗರ ತಾ||
6.	ಸತ್ಯಮೇವ ಜಯತೇ ಯುವಕ ಸಂಘ	ಶಾಂತಪುರ, ಕೊಡೂರು, ಹೊಸನಗರ ತಾ||
7.	ಗುರುರಾಘವೇಂದ್ರು ಯುವಕ ಸಂಘ	ಮುಂಬಾರೂ, ಹೊಸನಗರ ತಾ||

6. ಭದ್ರಾವತಿ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಶ್ರೀರಾಮ ಕನ್ನಡ ಯುವಕ ಸಂಘ	ಕೆಂಚೆನಹಳ್ಳಿ, ನೀರ್‍ನುಂಡಿ, ಭದ್ರಾವತಿ ತಾ||
2.	ಜೈ ಭುವನೇಶ್ವರಿ ಯುವಕರ ಸಂಘ,	ಹಳ್ಳಿಕೆರೆ, ಬಾರಂದೂರು, ಭದ್ರಾವತಿ ತಾ||
3.	ಗಜಸೇನೆ ಯುವಕ ಸಂಘ,	ಅಂತರಗಂಗೆ ಕ್ಯಾಂಪ್, ಭದ್ರಾವತಿ ತಾ||
4.	ರ್ಯತಮಿತ್ರ ಯುವಕರ ಸಂಘ,	ಬೊಮ್ಮನಹಳ್ಳಿ, ಹೊಸಬಡಾವಣೆ, ಬಾರಂದೂರು ಭದ್ರಾವತಿ ತಾ||
5.	ಶ್ರೀ ಶಾರದ ಯುವತಿ ಮಂಡಳಿ	ಆಗರದಹಳ್ಳಿ, ಹೊಳೆಹೊನ್ನೂರು, ಭದ್ರಾವತಿ ತಾ||
6.	ಶ್ರೀಶಕ್ತಿ ಜಾಗೃತಿ, ಯುವತಿ ಮಂಡಳಿ	ಮೈದೊಳಲು ಕ್ಯಾಂಪ್, ಮಲ್ಲಾಪುರ, ಭದ್ರಾವತಿ ತಾ||
7.	ಅನನ್ಯ ಯೂತ್ ಕ್ಲಬ್	ಶಂಕರಘಟ್ಟ, ಭದ್ರಾವತಿ ತಾ||
8.	ಭದ್ರಾವತಿ ತಾಲ್ಲೂಕು ಜೋಗಿ ಯುವಕ ಸಂಘ	ಕಂಬದಾಳ್ ಹೊಸೂರು, ಭದ್ರಾವತಿ ತಾ||
9.	ಶತಮಾನೋತ್ಸವ ಯುವ ಕ್ರೀಡಾ ಸಂಘ,	ಹೊಸಮನೆ, ಭದ್ರಾವತಿ ತಾ||
10.	ಸಹ್ಯಾದ್ರಿ ಯುವಕ ಸಂಘ	ಅಗರದಹಳ್ಳಿ, ಭದ್ರಾವತಿ ತಾ||
11.	ಪೈಲ್ವಾನ್ ಗಫಾರ್ ಕ್ರೀಡಾ ಯುವಕ ಸಂಘ	ದೊಣಬಘಟ್ಟ, ಭದ್ರಾವತಿ ತಾ||
12.	ಶ್ರೀ ವಿನಾಯಕ ಯುವಕ ಸಂಘ	ಕೆ.ಹೆಚ್.ನಗರ, ಸುಣ್ಣದಹಳ್ಳಿ, ಭದ್ರಾವತಿ ತಾ||
13.	ಶ್ರೀ ಚೌಡೇಶ್ವರಿ ಯುವಕ ಸಂಘ	ಕೆಂಚೆನಹಳ್ಳಿ, ಭದ್ರಾವತಿ ತಾ||
14.	ಅಂಜನೇಯ ಯುವಕ ಸಂಘ	ಬೊಮ್ಮನಹಳ್ಳಿ ಬಾರಂದೂರು ಭದ್ರಾವತಿ ತಾ||
15.	ಜಾಗೋ ಬಂಜಾರ್ ಯುವಕ ಸಂಘ	ಕಲ್ಪನಹಳ್ಳಿ, ಕೂಡ್ಲಿಗೆರೆ ಭದ್ರಾವತಿ ತಾ||

7. **ಶಿಕಾರಿಪುರ ತಾಲ್ಲೂಕು :**

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಸ್ಫೂರ್ತಿ ಯುವಕ ಸಂಘ	ಕಲ್ಮನೆ, ಶಿಕಾರಿಪುರ ತಾ||
2.	ಕನಕ ಯುವಕ ಜಾನಪದ ಕಲಾ ಸ್ವಸಾಯ ಸಂಘ,	ಹೊಸಮುಗಳಗೆರೆ, ಶಿಕಾರಿಪುರ ತಾ||
3.	ಸ್ನೇಹಬಂದು ಯುವಕ ಸಂಘ	ಚಿಕ್ಕಜೋಗಿಹಳ್ಳಿ, ಶಿಕಾರಿಪುರ ತಾ||
4.	ಜೈ ಶ್ರೀರಾಮ್ ಯುವಕ ಸಂಘ	ಉಡಗಣಿ, ಶಿಕಾರಿಪುರ ತಾ||
5.	ಶ್ರೀ ಆದಿಶಕ್ತಿ ಯುವಕ ಸಂಘ	ಕ್ಯಾಂಪ್‌ಕೇರಿ, ಈಸೂರು, ಶಿಕಾರಿಪುರ ತಾ||
6.	ಶ್ರೀ ಬಸವೇಶ್ವರ ಭಜನಾ ಯುವಕ ಸಂಘ	ದಿಂಡಹದಳ್ಳಿ, ಶಿಕಾರಿಪುರ ತಾ||
7.	ಶ್ರೀ ಗಾಳಿ ಆಂಜನೇಯ ಸೇವಾ ಸಂಘ	ಬೇಗೂರು ಮರಡಿ ತಾಂಡ, ಶಿಕಾರಿಪುರ ತಾ||
8.	ಫಾರ್ ಎವರ್ ಉತ್ಸಾಹಿ ಕ್ರೀಡಾ ಯುವಕರ ಸಂಘ	ತರಲಘಟ್ಟ, ಚಿಕ್ಕಜೋಗಿಹಳ್ಳಿ ಪೋಸ್ಟ್, ಶಿಕಾರಿಪುರ ತಾ||
9.	ನೆವರ್ ಎಂಡರ್ ಕ್ರೀಡಾ ಯುವಕರ ಸಂಘ	ಹೊಸೂರು ಪೋಸ್ಟ್, ಶಿಕಾರಿಪುರ ತಾ||

ಅನುಬಂಧ-2

ಕ್ರ.ಸಂ	ಯುವಕ / ಯುವತಿ ಮಂಡಳಿ ಹೆಸರು
2018-19	
1	ಕುಂಬಾರಕೆರೆ ಗೆಳೆಯರ ಬಳಗ, ಸೋನಲೆ ಗ್ರಾ.ಪಂ, ಹೊಸನಗರ ತಾ||
2	ಶ್ರೀ ನರಸಿಂಹ ಸ್ವಾಮಿ ಸೇವಾ ಸಮಿತಿ, ಹೆಗಲತ್ತಿ, ತೀರ್ಥಹಳ್ಳಿ ತಾ||
3	ಚೌಡೇಶ್ವರಿ ಯುವಕ ಸಂಘ, ಕಮರಿಕೊಪ್ಪ, ಸೊರಬ ತಾ||
4	ಶ್ರೀ ಬಸವೇಶ್ವರ ಯುವಕ ಸಂಘ, ಗಂಗೊಳ್ಳಿ, ಸೊರಬ ತಾ||
5	ನೇತಾಜಿ ಯುವಕ ಸಂಘ, ಬೇಗೂರು, ಶಿಕಾರಿಪುರ ತಾ||
6	ಬಿ.ಎಸ್.ಜಿ ಫ್ರೆಂಡ್ಸ್ ಬಿಲ್ಲೇಶ್ವರ, ಹೊಸನಗರ ತಾ||
7	ವೀರಭದ್ರೇಶ್ವರ ಯುವಕ ಸಂಘ, ಬೇಡರಹೊಸಹಳ್ಳಿ, ಶಿವಮೊಗ್ಗ ತಾ||
8	ಶ್ರೀ ಮೈಲಾರೇಶ್ವರ ಯುವಕ ಸಂಘ, ಶೆಟ್ಟಿಹಳ್ಳಿ, ಶಿವಮೊಗ್ಗ ತಾ||
9	ಶ್ರೀ ದುರ್ಗಾಪರಮೇಶ್ವರಿ ಸ್ತ್ರೀ-ಶಕ್ತಿ ಸ್ವ ಸಹಾಯಕ ಸಂಘ, ಮಂಗೋಟೆ, ಭದ್ರಾವತಿ ತಾ||
10	ಮುತ್ತು ಮಾರಿಯಮ್ಮ ಯುವಕರ ಸಂಘ, ಆರಳಿಹಳ್ಳಿ, ಭದ್ರಾವತಿ ತಾ||
11	ನವೋದಯ ಯುವಕ ಸಂಘ, ಅರಳಾಪುರ, ಹೊದಲಾ ಗ್ರಾ.ಪಂ ತೀರ್ಥಹಳ್ಳಿ ತಾ||
12	ಬೇಳೂರು ಯುವಕ ಸಂಘ, ಬೇಳೂರು ತೀರ್ಥಹಳ್ಳಿ ತಾ||
2019-20	
1.	ಚೌಡೇಶ್ವರಿ ಯುವಕ ಸಂಘ, ತುಮರಿಕೊಪ್ಪ, ಸೊರಬ ತಾ||
2.	ಸಿದ್ದರಾಮೇಶ್ವರ ಯುವಕ ಸಂಘ, ತತ್ತೂರು, ವಡ್ಡಿಗೆರೆ, ಸೊರಬ ತಾ||
3.	ಅಕ್ಕಮಹಾದೇವಿ ಹವ್ಯಾಸಿ ಯುವತಿ ಮಂಡಳಿ, ಶಿಕಾರಿಪುರ ತಾ||
4.	ಶಿವಾಜಿ ಡೊಳ್ಳಿನ ಯುವಕರ ಸಂಘ, ಬೆಂಡೆಕಟ್ಟೆ, ಶಿಕಾರಿಪುರ ತಾ||
5.	ಶ್ರೀ ಗುರು ರಾಘವೇಂದ್ರ ಯುವಕ ಸಂಘ, ಹೊಸನಗರ ತಾ||
6.	ಶ್ರೀ ರಾಮೇಶ್ವರ ಯುವಕ ಸಂಘ, ಸೊನಲೆ, ಹೊಸನಗರ ತಾ||
7.	ಶ್ರೀ ಮಾರುತಿ ಯುವಕ ಸಂಘ, ಮಳಲಿಕೊಪ್ಪ, ಶಿವಮೊಗ್ಗ ತಾ||
8.	ಶ್ರೀ ದುರ್ಗಾಂಬ ಯುವಕರ ಸಂಘ, ಹಾರನಹಳ್ಳಿ, ಶಿವಮೊಗ್ಗ ತಾ||
9.	ಶ್ರೀ ದುರ್ಗಾಪರಮೇಶ್ವರಿ ಸ್ತ್ರೀ-ಶಕ್ತಿ ಸ್ವ-ಸಹಾಯ ಸಂಘ, ಮಂಗೋಟೆ, ಭದ್ರಾವತಿ ತಾ||
10.	ಜೋಗಿ ಯುವಕರ ಸಂಘ, ಕಂಬದಾಳು ಹೊಸೂರು, ಭದ್ರಾವತಿ ತಾ||
11.	ಸಾಲುಕಟ್ಟೆ ಯುವತಿ ಮಂಡಳಿ, ಸಾಲುಕಟ್ಟೆ, ತೀರ್ಥಹಳ್ಳಿ ತಾ||
12.	ನವೋದಯ ಯುವಕ ಸಂಘ, ಅರಳಾಪುರ, ತೀರ್ಥಹಳ್ಳಿ ತಾ||
13.	ಕಣ್ಣೂರು ಯುವಕ ಸಂಘ, ಕಣ್ಣೂರು, ಸಾಗರ ತಾ||
14.	ಶ್ರೀ ಗ್ರಾಮೇಶ್ವರ ಯುವಕ ಸಂಘ, ಗಾಮನಕೊಡ್ಲು, ಹಳವಗೋಡು ಗ್ರಾಮ, ಸಾಗರ ತಾ||
15.	ನವೋದಯ ಯುವಕ ಸಂಘ, ಮಾವಿನಕುಳಿ, ಸಾಗರ ತಾ||
16.	ಶ್ರೀ ಸಂತ ಸೇವಾಲಾಲ್ ಯುವಕರ ಸಂಘ, ಕುಂಚೇನಹಳ್ಳಿ, ಕೆಳಗಿನ ತಾಂಡ, ಶಿವಮೊಗ್ಗ ತಾ||

17.	ಕನ್ನಡ ಯುವಸೇನೆ, ಕಣ್ಣೂರು, ಸಾಗರ ತಾ||
18.	ನಂಜಪ್ಪ ಬಡಾವಣೆ ಯುವಕರ ಸಂಘ, ಶಿವಮೊಗ್ಗ
19.	ಸಹ್ಯಾದ್ರಿ ಕನ್ನಡ ಸ್ವ-ಸಹಾಯಕ ಸಂಘ, ಗುತ್ತನಹಳ್ಳಿ, ಬರೂರು (ಅ) ಸಾಗರ ತಾ||
20.	ಬಿ.ಎನ್.ಶಾರದಮ್ಮ ಲೇ-ಔಟ್ ನಿವಾಸಿಗಳ ಸಂಘ (ರಿ), ಸೋಮಿನಕೊಪ್ಪ ರಸ್ತೆ, ವಿನೋಬನಗರ, ಶಿವಮೊಗ್ಗ
21.	ಪ್ರಿಯಾಂಕ ಲೇ ಔಟ್ ಯುವಕರ ಸಂಘ, 3ನೇ ತಿರುವು, ಪ್ರಿಯಾಂಕ ಲೇ ಔಟ್, ಶಿವಮೊಗ್ಗ
22.	ಶ್ರೀ ಕೆರೆ ಏರಿ ಚೌಡೇಶ್ವರಿ ಸೇವಾ ಟ್ರಸ್ಟ್, ತಾಷ್ಕೆಂಟ್ ನಗರ, ಭದ್ರಾವತಿ ತಾ||
23.	ಪ್ರೇರಣ ಯುವಕರ ಸಂಘ, ದುರ್ಗಿಗುಡಿ, ಶಿವಮೊಗ್ಗ
24.	ಸರ್ವೋದಯ ಯುವಕ ಸಂಘ, ಉಳವಿ, ಸೊರಬ ತಾ||
25.	ಆನವೇರಿ ಯುವಕ ಸಂಘ, ಆನವೇರಿ, ಭದ್ರಾವತಿ ತಾ||
26.	ಶ್ರೀ ಸಿದ್ಧಿವಿನಾಯಕ ಯುವಕ ಸಂಘ, ಕಾರ್ಗಡಿ, ಹೊಸನಗರ ತಾ||
27.	ಭಾವಸಾರ ಯುವಕ ಸಂಘ, ಗಾಂಧಿಬಜಾರ್, ಶಿವಮೊಗ್ಗ
28.	ತುಂಗಾತೀರ್ಥ ಯೂತ್ ಸ್ಪೋರ್ಟ್ಸ್ ಟ್ರಸ್ಟ್, ಮಳಲಿಮಕ್ಕಿ, ದೇಮ್ಲಾಪುರ, ತೀರ್ಥಹಳ್ಳಿ ತಾ||
29.	ಬೆಳಕು ಕಲಾ ತಂಡ, ವೀರಣ್ಣ ಲೇ ಔಟ್, ವಿನೋಬನಗರ, ಶಿವಮೊಗ್ಗ ತಾ||
30.	ಸರ್. ಎಂ.ವಿ. ಯೂಥ್ ಸ್ಪೋರ್ಟ್ಸ್ ಕ್ಲಬ್, ಗೊಂದಿಕಾಯಿಮರ, ಭದ್ರಾವತಿ ತಾ||
31.	ಕನ್ನಡ ಯುವಕ ಸಂಘ ದೊಡ್ಡ ಗುಪ್ಪೇನಹಳ್ಳಿ, ಭದ್ರಾವತಿ ತಾ ತಾ||
32.	ಮಲೆನಾಡು ಸ್ಪೋರ್ಟ್ಸ್ ಕ್ಲಬ್ (ರಿ) ತಾಲ್ಲೂಕು ಕ್ರೀಡಾಂಗಣ ಶಿಕಾರಿಪುರ ತಾ||
33.	ಡಾ|| ಬಿ.ಆರ್.ಅಂಬೇಡ್ಕರ್ ಯುವಕರ ಸೇವಾ ಸಂಘ, (ಎಸ್.ಸಿ), ಚಿಕ್ಕಮಾಗಡಿ ತಾಂಡ ಶಿಕಾರಿಪುರ ತಾ||
34.	ಶ್ರೀ ಸಿದ್ಧರಾಮೇಶ್ವರ ಯುವಕರ ಸಂಘ, ತತ್ತೂರು, ಮಾಗೇರಿ, ಸೊರಬ ತಾ||
35.	ಜಾಗೋ ಬಂಜಾರ ಯುವಕರ ಸಂಘ (ರಿ), ಕಲ್ಪನಹಳ್ಳಿ, ಭದ್ರಾವತಿ ತಾ||
36.	ಶ್ರೀ ರಾಮೇಶ್ವರ ಯುವಕ ಸಂಘ, ಕೂರ್ಲಿಕೊಪ್ಪ, ಬರೂರು ಅಂಚೆ, ಸಾಗರ ತಾ||
37.	ಜೈ ಮಾರುತಿ ಯುವಕರ ಸಂಘ , ಹಳೆ ಸೀಗೆಬಾಗೆ , ಭದ್ರಾವತಿ ತಾ||
38.	ಶ್ರೀ ರಾಜೀವ್ ಗಾಂಧಿ ಯುವಕರ ಸಂಘ , ಕೂಡ್ಲಿಗೆರೆ , ಭದ್ರಾವತಿ ತಾ||

ಕರ್ನಾಟಕ ಸರ್ಕಾರ

ಸಂಖ್ಯೆ: ಟಿಓಆರ್ 245 ಟಿಡಿವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 07.12.2020.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸಸೌಧ, ಬೆಂಗಳೂರು,

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ. ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ, ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 318 ಕ್ಕೆ ಉತ್ತರ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.318/2020, ದಿನಾಂಕ: 30.11.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಶ್ರೀ. ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ, ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 318 ಕ್ಕೆ** ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಆರ್. ರಾಜಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	318
ಮಾನ್ಯ ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ವಿಷಯ	:	ಪ್ರವಾಸಿ ತಾಣಗಳು
ಉತ್ತರಿಸುವ ದಿನಾಂಕ	:	08.12.2020
ಉತ್ತರಿಸುವವರು	:	ಮುಖ್ಯ ಮಂತ್ರಿ

*****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣ, ಐತಿಹಾಸಿಕ ಸ್ಥಳಗಳಾವುವು (ಸಂಪೂರ್ಣ ವಿವರ ನೀಡುವುದು)	ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳ ವಿವರ ಕೆಳಗಿನಂತಿದೆ. (ಕೆಳಗಿನ ಪಟ್ಟಿ ನೋಡಿ)
ಆ)	ಈ ಜಿಲ್ಲೆಯ ಎಷ್ಟು ಪ್ರವಾಸಿ ತಾಣಗಳಲ್ಲಿ ಯಾತ್ರಿ ನಿವಾಸಗಳನ್ನು ನಿರ್ಮಾಣ ಮಾಡಲಾಗಿದೆ; ಇನ್ನೂ ಎಷ್ಟು ತಾಣಗಳಲ್ಲಿ ಯಾತ್ರಿ ನಿವಾಸಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗಿದೆ. (ಮಾಹಿತಿ ನೀಡುವುದು)	ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಾಣ ಮಾಡಿರುವ ಯಾತ್ರಿ ನಿವಾಸ/ಡಾರ್ಮಿಟರಿ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.
ಇ)	ಕಳೆದ ಮೂರು ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ವೆಚ್ಚ ಮಾಡಿರುವ ಅನುದಾನ ಎಷ್ಟು (ವರ್ಷವಾರು, ಯೋಜನೆವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಶಿವಮೊಗ್ಗ ಜಿಲ್ಲೆಗೆ ವಿವಿಧ ಯೋಜನೆಗಳಿಗೆ/ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಗಿನಂತಿದೆ. (ಕೆಳಗಿನ ಪಟ್ಟಿ ನೋಡಿ)

ಅ) ಉತ್ತರದ ಪಟ್ಟಿ:

ಕ್ರ. ಸಂ	ತಾಲ್ಲೂಕು	ಸ್ಥಳಗಳು
1	ಭದ್ರಾವತಿ	ಭದ್ರಾವತಿ, ಭದ್ರ, ಆಣೆಕಟ್ಟು
2	ಹೊಸನಗರ	ನಗರ, ಹುಮ್ಮಾ, ಕೊಡಚಾದ್ರಿ
3	ಸಾಗರ	ಇಕ್ಕೇರಿ, ಜೋಗಜಲಪಾತ, ವರದಮೂಲ, ಕೆಳದಿ
4	ಶಿಕಾರಿಪುರ	ತೊಗರ್ಸಿ, ಉಡುತಡಿ, ಬಳ್ಳಿಗಾವಿ
5	ಶಿವಮೊಗ್ಗ	ತ್ಯಾವರೆಕೊಪ್ಪ ಸಿಂಹಧಾಮ, ಸಕ್ಕರೆ ಬೈಲು ಆನೆ ಶಿಬಿರ, ಗಾಜನೂರು, ಆಣೆಕಟ್ಟು, ಕೂಡ್ಲಿ, ಗಾಜನೂರು.
6	ಸೊರಬ	ಚಂದ್ರಗುತ್ತಿ, ಸೊರಬ, ಗುಡವಿಪಾಕ್ಷಿಧಾಮ
7	ತೀರ್ಥಹಳ್ಳಿ	ತೀರ್ಥಹಳ್ಳಿ, ಕುಪ್ಪಳ್ಳಿ ಕುವೆಂಪು ವಸ್ತು ಸಂಗ್ರಹಾಲಯ, ಕವಲೇದುರ್ಗ, ಆಗುಂಬೆ, ಮಂಡಗದ್ದೆ ಪಕ್ಷಿಧಾಮ, ಕುಂದಾದ್ರಿ, ಮಾರೀಚ ಮೃಗಾವಧ ಅಂಬುತೀರ್ಥ.

ಇ) ಉತ್ತರದ ಪಟ್ಟಿ:

(ರೂ.ಲಕ್ಷಗಳಲ್ಲಿ)

ಯೋಜನೆ/ಕಾರ್ಯಕ್ರಮ	2017-18	2018-19	2019-20
ಪ್ರವಾಸಿ ಟ್ಯಾಕ್ಸಿ ಯೋಜನೆ	156.00	93.00	57.00
ಕರ್ನಾಟಕ ದರ್ಶನ ಯೋಜನೆ	43.05	33.91	21.41
ಬಂಡವಾಳ ವೆಚ್ಚಗಳಯೋಜನೆ	274.50	405.00	120.50
ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ	10.00	10.00	0.00
ಒಟ್ಟು	483.55	541.91	198.91

ಸಂಖ್ಯೆ: ಟಿಒಆರ್ 245 ಟಿಡಿವಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ (ಶಿವಮೊಗ್ಗ ಗ್ರಾಮಾಂತರ) ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 318 ಕ್ಕೆ ಅನುಬಂಧ

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಲಾದ ಯಾತ್ರಿನಿವಾಸ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಕಾಮಗಾರಿಯ ಹಂತ
1	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಕುಪ್ಪಳಿ ಡಾರ್ಮಿಟರಿ ನಿರ್ಮಾಣ. (2007-08)	53.30	ಕಾಮಗಾರಿ ಪೂರ್ಣಗೊಂಡಿದೆ.
2	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಅಂಬುತೀರ್ಥ ಡಾರ್ಮಿಟರಿ ನಿರ್ಮಾಣ. (2007-08)	47.08	ಕಾಮಗಾರಿ ಪೂರ್ಣಗೊಂಡಿದೆ.
3	ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ತೋಗರ್ಸಿ ಯಾತ್ರಿನಿವಾಸ ನಿರ್ಮಾಣ. (2008-09)	10.00	ಕಾಮಗಾರಿ ಪೂರ್ಣಗೊಂಡಿದೆ.
4	ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಬಳ್ಳಿಗಾವಿ ಯಾತ್ರಿನಿವಾಸ ನಿರ್ಮಾಣ. (1998-99)	50.00	ಕಾಮಗಾರಿ ಪೂರ್ಣಗೊಂಡಿದೆ.
5	ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ನಗರದಲ್ಲಿ ಹುಚ್ಚರಾಯನ ಕೆರೆ ಬಳಿ ಡಾರ್ಮಿಟರಿ ನಿರ್ಮಾಣ. (2007-08)	81.41	ಕಾಮಗಾರಿ ಪೂರ್ಣಗೊಂಡಿದೆ.
6	ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು ಉಡುತಡಿಯಲ್ಲಿ ಡಾರ್ಮಿಟರಿ ನಿರ್ಮಾಣ. (2007-08)	60.00	ಕಾಮಗಾರಿ ಪೂರ್ಣಗೊಂಡಿದೆ.
7	ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು ಜೋಗ ಜಲಪಾತದ ಬಳಿ ಯಾತ್ರಿನಿವಾಸ ನಿರ್ಮಾಣ. (2007-08)	50.00	ಕಾಮಗಾರಿ ಪೂರ್ಣಗೊಂಡಿದೆ.
8	ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು ವರದಹಳ್ಳಿ ಡಾರ್ಮಿಟರಿ ನಿರ್ಮಾಣ. (2012-13)	40.00	ಕಾಮಗಾರಿ ಪೂರ್ಣಗೊಂಡಿದೆ.
9	ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಜಡೆ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. (2017-18)	25.00	ಕಾಮಗಾರಿ ಪೂರ್ಣಗೊಂಡಿದೆ.
10	ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಚಂದ್ರವಳ್ಳಿ ಬಳಿ ಯಾತ್ರಿನಿವಾಸ ನಿರ್ಮಾಣ. (2008-09)	50.00	ಕಾಮಗಾರಿ ಪೂರ್ಣಗೊಂಡಿದೆ.
11	ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಲಕ್ಕವಳ್ಳಿ ಬಳಿ ಡಾರ್ಮಿಟರಿ ನಿರ್ಮಾಣ. (2012-13)	50.00	ಕಾಮಗಾರಿ ಪೂರ್ಣಗೊಂಡಿದೆ.
12	ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕು ಸೈದರ ಕಲ್ಲಹಳ್ಳಿ ಬಳಿ ಡಾರ್ಮಿಟರಿ ನಿರ್ಮಾಣ. (2015-16)	40.00	ಕಾಮಗಾರಿ ಪೂರ್ಣಗೊಂಡಿದೆ.
13	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು ನಾರಾಯಣಗುರು ಸಂಸ್ಥಾನ ಮಠದ ಬಳಿ (ನಿಟ್ಟೂರು) ಬಳಿ ಡಾರ್ಮಿಟರಿ ನಿರ್ಮಾಣ. (2015-16)	40.00	ಕಾಮಗಾರಿ ಪೂರ್ಣಗೊಂಡಿದೆ.
14	ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ತೋಗರ್ಸಿ ಬಳಿ ಯಾತ್ರಿನಿವಾಸ ನಿರ್ಮಾಣ. (2015-16)	50.00	ಕಾಮಗಾರಿ ಪೂರ್ಣಗೊಂಡಿದೆ.
15	ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು ಕೊಡ್ಲಿ ಕ್ಷೇತ್ರದಲ್ಲಿ ಡಾರ್ಮಿಟರಿ ನಿರ್ಮಾಣ. (2012-13)	30.00	ಕಾಮಗಾರಿ ಪೂರ್ಣಗೊಂಡಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಕಾಮಗಾರಿಯ ಹಂತ
16	ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು ಚಿಕ್ಕಕೊಡ್ಲಿ ಬಳಿ ಯಾತ್ರಿನಿವಾಸ ನಿರ್ಮಾಣ. (2017–18)	25.00	ಕಾಮಗಾರಿ ಪೂರ್ಣಗೊಂಡಿದೆ.
17	ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ನಗರದ ಶಾಲೀನ್ ದರ್ಗಾ ಬಳಿ ಯಾತ್ರಿನಿವಾಸ ನಿರ್ಮಾಣ. (2016–17)	50.00	ಕಾಮಗಾರಿ ಪೂರ್ಣಗೊಂಡಿದೆ.
18	ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ನಗರದ ಬೊಮ್ಮನಕಟ್ಟೆ ಬಳಿ ಯಾತ್ರಿನಿವಾಸ ನಿರ್ಮಾಣ. (2016–17)	50.00	ಕಾಮಗಾರಿ ಪೂರ್ಣಗೊಂಡಿದೆ.
19	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು ಕವಲೇದುರ್ಗ ಕಳದಿ ರಾಜಗುರು ಮಹಾಮತ್ತಿನ ಭುವನಗಿರಿ ಸಂಸ್ಥಾನ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. (2017–18)	50.00	ಕಾಮಗಾರಿ ಪೂರ್ಣಗೊಂಡಿದೆ.
20	ಶಿವಮೊಗ್ಗ ಜಿಲ್ಲೆ, ಅಯನೂರು ಹೋಬಳಿ ಮಲ್ಲೇಶಂಕರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ. (2017–18)	25.00	ಕಾಮಗಾರಿ ಪೂರ್ಣಗೊಂಡಿದೆ.
21	ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು ಆನಂದಪುರಂ ಶ್ರೀ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸಂಸ್ಥಾನ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. (2017–18)	25.00	ಕಾಮಗಾರಿ ಪೂರ್ಣಗೊಂಡಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಯಾತ್ರಿನಿವಾಸ ಕಾಮಗಾರಿಗಳು ಪ್ರಾರಂಭಿಸಿ ಪ್ರಗತಿಯಲ್ಲಿರುವ ಹಾಗೂ ಪ್ರಾರಂಭಿಸಬೇಕಾಗಿರುವ ಕಾಮಗಾರಿಗಳ ವಿವರ

1	ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು, ಚಂದ್ರಗುತ್ತಿ ಪ್ರವಾಸಿ ಸ್ಥಳದಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ. (ಬಂಡವಾಳ ವೆಚ್ಚಗಳು 2018–19)	150.00	ಕಾಮಗಾರಿ ಪ್ರಗತಿಯಲ್ಲಿದೆ.
2	ಶಿವಮೊಗ್ಗ ಜಿಲ್ಲೆ ರಾಮಚಂದ್ರಾಪುರ ಮಠದ ಬಳಿ 2 ಹಾಸಿಗೆಗಳ 30 ಕೊಠಡಿಗಳ ಯಾತ್ರಿನಿವಾಸ ಹಾಗೂ 80 ಹಾಸಿಗೆಗಳ ಡಾರ್ಮಿಟರಿ ನಿರ್ಮಾಣ. (ಬಂಡವಾಳ ವೆಚ್ಚಗಳು 2007–08)	437.83	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.
3	ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು, ರಾಮಚಂದ್ರಪುರ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ.(ಬಂಡವಾಳ ವೆಚ್ಚಗಳು 2019–20)	150.00	ಕಾಮಗಾರಿ ಪ್ರಾರಂಭಿಸಬೇಕಿದೆ.
4	ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಸಿಗಂದೂರು ಪ್ರವಾಸಿ ಸ್ಥಳದಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ.(ಬಂಡವಾಳ ವೆಚ್ಚಗಳು 2016–17)	100.00	ಕಾಮಗಾರಿ ಪ್ರಗತಿಯಲ್ಲಿದೆ.
5	ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಕಪ್ಪನಹಳ್ಳಿ ಗ್ರಾಮ ಪಂಚಾಯತ್ ಕಾಲೇನಹಳ್ಳಿ ಮಂದಿರದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ. (ಬಂಡವಾಳ ವೆಚ್ಚಗಳು 2019–20)	50.00	ಕಾಮಗಾರಿ ಪ್ರಾರಂಭಿಸಬೇಕಿದೆ.
6	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ನಿಟ್ಟೂರು ಶ್ರೀ ನಾರಾಯಣಗುರು ಮಹಾಸಂಸ್ಥಾನ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. (ಬಂಡವಾಳ ವೆಚ್ಚಗಳು 2019–20)	25.00	ಕಾಮಗಾರಿ ಪ್ರಾರಂಭಿಸಬೇಕಿದೆ.
7	ಭದ್ರಾವತಿ ತಾಲ್ಲೂಕು ಹೊನ್ನೆಗುಡ್ಡದ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಹತ್ತಿರ ಯಾತ್ರಿ ನಿವಾಸ ನಿರ್ಮಾಣ. (ಬಂಡವಾಳ ವೆಚ್ಚಗಳು 2019–20)	60.00	ಕಾಮಗಾರಿ ಪ್ರಾರಂಭಿಸಬೇಕಿದೆ.

****

ಕರ್ನಾಟಕ ಸರ್ಕಾರ

ಸಂಖ್ಯೆ: ಹೆಚ್‌ಡಿ 127 ಪಿಓಪಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 07.12.2020.

US
127
8/12/20

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಣ್ಣ ಬಿ. (ಆನೇಕಲ್) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 319ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.319/2020, ದಿನಾಂಕ:30-11-2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಣ್ಣ ಬಿ. (ಆನೇಕಲ್) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 319ಕ್ಕೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

7/12/2020
(ಬಿ.ಎನ್.ದೇವರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ವೆಚ್ಚ)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 319
2. ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ.(ಆನೇಕಲ್)
3. ಉತ್ತರಿಸುವ ದಿನಾಂಕ : 08/12/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿಗೆ ಟ್ರಾಫಿಕ್ ಪೊಲೀಸ್ ಠಾಣೆ ಮತ್ತು ಮಹಿಳಾ ಪೊಲೀಸ್ ಠಾಣೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ;	ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಈ ತಾಲ್ಲೂಕಿಗೆ ಟ್ರಾಫಿಕ್ ಪೊಲೀಸ್ ಠಾಣೆ ಮತ್ತು ಮಹಿಳಾ ಪೊಲೀಸ್ ಠಾಣೆಯನ್ನು ಯಾವಾಗ ಮಂಜೂರು ಮಾಡಿ ಕಾರ್ಯಾರಂಭ ಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು) ;	ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಡಿ/124/ಪಿಓಪಿ/2016, ದಿನಾಂಕ: 12.05.2016 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ (ಆನೇಕಲ್ ಸೇರಿದಂತೆ) ಮಹಿಳಾ ಪೊಲೀಸ್ ಠಾಣೆಯನ್ನು ಮಂಜೂರು ಮಾಡಲಾಗಿರುತ್ತದೆ. ಜಿಲ್ಲೆಗೊಂದರಂತೆ ಸ್ಥಾಪಿಸಲಾದ ಮಹಿಳಾ ಪೊಲೀಸ್ ಠಾಣೆಯು ಪ್ರಸ್ತುತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಕಾರ್ಯನಿರ್ವಹಿಸುತ್ತಿದೆ.
ಇ)	ಈ ತಾಲ್ಲೂಕು ನೂರಾರು ಕೈಗಾರಿಕೆಗಳನ್ನು ಹೊಂದಿದ್ದು, ಲಕ್ಷಾಂತರ ಜನ ಕಾರ್ಮಿಕರು ಪ್ರಯಾಣಿಸುತ್ತಿರುವುದರಿಂದ ಟ್ರಾಫಿಕ್ ಮತ್ತು ಮಹಿಳಾ ಪೊಲೀಸ್ ಠಾಣೆ ಅಗತ್ಯವಾಗಿ ಮಂಜೂರು ಮಾಡಬೇಕೆಂಬ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ (ವಿವರ ನೀಡುವುದು) ?	ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ:ಹೆಚ್‌ಡಿ 127 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ಸರ್ಕಾರ

ಸಂ: ನಅಇ 255 ಪಿಆರ್‌ಜೆ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:-08-12-2020

128

8/12/2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಣ್ಣ ಬಿ. (ಆನೇಕಲ್) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 321 ಕ್ಕೆ ಉತ್ತರಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಣ್ಣ ಬಿ. (ಆನೇಕಲ್) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 321 ರ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪಿ.ಎಂ.ಸಿ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 380
ಸದಸ್ಯರ ಹೆಸರು : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
ಉತ್ತರಿಸಬೇಕಾದ ದಿನಾಂಕ : 08-12-2020
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ಮಹಾನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ ಟೆಂಡರ್ ಶ್ಯೂರ್ ಅಡಿ ಎಷ್ಟು ಅಂತರದ, ಯಾವ ಯಾವ ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.	ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ, ಟೆಂಡರ್ ಶ್ಯೂರ್ ಅಡಿ ಸುಮಾರು 29.54ಕಿ.ಮೀ ಉದ್ದ (ಅಂತರ)ವನ್ನು ಒಳಗೊಂಡಂತೆ 36 ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿವರಗಳನ್ನು **ಅನುಬಂಧ-ಅ** ರಲ್ಲಿ ನೀಡಿದೆ
ಆ	ಸದರಿ ರಸ್ತೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು;	ಸದರಿ 36 ರಸ್ತೆಗಳ ಅಭಿವೃದ್ಧಿಗಾಗಿ ಒಟ್ಟು ರೂ.481.65 ಕೋಟಿ ವೆಚ್ಚ ಮಾಡಲಾಗುತ್ತಿದೆ.
ಇ	ಎಷ್ಟು ಪ್ಯಾಕೇಜ್‌ಗಳಡಿ ಯೋಜನೆಗಳನ್ನು ನಿರ್ವಹಿಸಲಾಗುತ್ತಿದೆ;	ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಫೇಸ್-ಎ-7 ಪ್ಯಾಕೇಜ್‌ಗಳಲ್ಲಿ 20 ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು ಫೇಸ್-ಬಿ- 6 ಪ್ಯಾಕೇಜ್‌ಗಳಲ್ಲಿ 16 ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
ಈ	ಈ ರಸ್ತೆಗಳ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕಾಗಿದೆ;	ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಎಲ್ಲಾ ರಸ್ತೆ ಕಾಮಗಾರಿಗಳನ್ನು ಏಪ್ರಿಲ್-2021 ರೊಳಗೆ ಪೂರ್ಣಗೊಳಿಸಲಾಗುವುದು.
ಉ	ಕಾಮಗಾರಿ ಪೂರ್ಣಗೊಳಿಸುವಲ್ಲಿನ ವಿಳಂಬಕ್ಕೆ ಕಾರಣಗಳೇನು? (ಮಾಹಿತಿ ನೀಡುವುದು)	ಕಾಮಗಾರಿ ಪೂರ್ಣಗೊಳಿಸುವಲ್ಲಿನ ವಿಳಂಬಕ್ಕೆ ಕಾರಣಗಳು; • ಕೋವಿಡ್-19 ರ ಲಾಕ್‌ಡೌನ್ ನಿಂದ ಸುಮಾರು 3 ರಿಂದ 6 ತಿಂಗಳವರೆಗೆ ಸಾಮಗ್ರಿಗಳ ಮತ್ತು ಕಾರ್ಮಿಕರ ಅಲಭ್ಯತೆಯಿಂದ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ. • ಬೆಸ್ಕಾಂ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಸ್‌ಎನ್‌ಎಲ್ ಉಪಯುಕ್ತತೆಗಳ ಸ್ಥಳಾಂತರ. • ಯೋಜನಾ ಸಮಾಲೋಚಕರಿಂದ ಜಿಎಫ್‌ಸಿ (GFC) ಸರ್ವೆ ಮತ್ತು ವಿನ್ಯಾಸ ನೀಡುವಿಕೆಯಲ್ಲಿ ಕಾಲಾವಕಾಶ ತೆಗೆದುಕೊಂಡಿರುತ್ತದೆ. • ಕಾಮಗಾರಿಗಳನ್ನು ಪ್ರಾರಂಭಿಸಲು ಪೋಲೀಸ್ ಅನುಮತಿ ಪತ್ರ ನೀಡುವಿಕೆಯಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ಎಲ್ಲಾ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಏಪ್ರಿಲ್ 2021 ರೊಳಗೆ ಪೂರ್ಣಗೊಳಿಸಲಾಗುವುದು.

ಸಂಖ್ಯೆ:ನಅಇ 322 ಸಿಎಸ್‌ಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮಾನ್ಯ ಮುಖ್ಯಮಂತ್ರಿಗಳು

ಅನುಬಂಧ - ಅ

ಕಛೇರಿ ಹೆಸರು: ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳ ವಿವರ

ರೂ.ಕೋಟಿಗಳಲ್ಲಿ

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
1	ಫೇಸ್ - ಎ, ಪ್ಯಾಕೇಜ್-1	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 1 1. ಕಮರ್ಷಿಯಲ್ ಸ್ಟ್ರೀಟ್-ಕಾಮರಾಜ್ ರಸ್ತೆಯಿಂದ ಜುಮ್ಮಾ ಮಸೀದಿ ರಸ್ತೆವರೆಗೆ (ಬೌರಿಂಗ್ ಆಸ್ಪತ್ರೆಯ ಹತ್ತಿರ)	0.458	35.93	ಕಾಮಗಾರಿ ಪ್ರಗತಿಯಲ್ಲಿದೆ
2		2. ಕಾಮರಾಜ್ ರಸ್ತೆ.- ಎಂ ಜಿ ರಸ್ತೆಯಿಂದ ಕಮರ್ಷಿಯಲ್ ಸ್ಟ್ರೀಟ್ ವರೆಗೆ ಮತ್ತು ಸೇಂಟ್ ಜಾನ್ಸ್ ಚರ್ಚ್ ರಸ್ತೆವರೆಗೆ	1.829		
3	ಫೇಸ್ - ಎ, ಪ್ಯಾಕೇಜ್-2	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 2 1. ಹಲಸೂರು ರಸ್ತೆ- ಡಿಕನ್ಸನ್ ರಸ್ತೆಯಿಂದ ಕೆನ್ಸಿಂಗ್ಟನ್ ರಸ್ತೆಯವರೆಗೆ	0.585	29.27	ಕಾಮಗಾರಿ ಪ್ರಗತಿಯಲ್ಲಿದೆ
4		2. ಡಿಕನ್ಸನ್ ರಸ್ತೆ- ಎಂ ಜಿ ರಸ್ತೆಯಿಂದ ಕಾಮರಾಜ್ ರಸ್ತೆಯವರೆಗೆ	1.2		
5	ಫೇಸ್ - ಎ, ಪ್ಯಾಕೇಜ್-3	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 3 1. ಇನ್‌ಫೆಂಟ್ರಿ ರಸ್ತೆ- ಅಲಿ ಅಸ್ಕರ್ ರಸ್ತೆಯಿಂದ ಸಫಿನಾ ಪ್ಲಾಜಾ ಕಾಂಪ್ಲೆಕ್ಸ್ ವರೆಗೆ (ಮುಖ್ಯ ಗಾರ್ಡ್ ಕ್ರಾಸ್ ರಸ್ತೆ)	1.647	53.26	ಕಾಮಗಾರಿ ಪ್ರಗತಿಯಲ್ಲಿದೆ
6		2. ಸೆಂಟ್ರಲ್ ಸ್ಟ್ರೀಟ್ ಎಂ ಜಿ ರಸ್ತೆಯಿಂದ ಶಿವಾಜಿನಗರ ಬಸ್ ನಿಲ್ದಾಣ (ಟಿಟಿಎಂಸಿ) ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ (ಬಾಳೆಕುಂದ್ರಿ) ಜಂಕ್ಷನ್ ವರೆಗೆ	0.842		
7		3. ಬೋರಿಂಗ್ ಆಸ್ಪತ್ರೆ ರಸ್ತೆ - ಮುಖ್ಯ ಗಾರ್ಡ್ ಕ್ರಾಸ್ ರಸ್ತೆಯಿಂದ ಎಚ್‌ಎಸ್‌ಐಎಸ್ ಘೋಷಾ ಆಸ್ಪತ್ರೆವರೆಗೆ	0.836		
8	ಫೇಸ್ - ಎ, ಪ್ಯಾಕೇಜ್-4	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 4 1. ಮಿಲ್ಲರ್ಸ್ ರಸ್ತೆ - ಚಾಲುಕ್ಯ ವೃತ್ತದಿಂದ ಕಂಟೋನ್ಮೆಂಟ್ ವರೆಗೆ ಕ್ವೀನ್ಸ್ ರಸ್ತೆ ಮೂಲಕ	1.305	39.98	ಕಾಮಗಾರಿ ಪ್ರಗತಿಯಲ್ಲಿದೆ
9		2. ರಾಜ್ ಭವನ ರಸ್ತೆ- ಮಿನ್ಸ್ಕ ಚೌಕದಿಂದ ಬಸವೇಶ್ವರ ವೃತ್ತದವರೆಗೆ	0.92		

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
10	ಫೇಸ್ - ಎ, ಪ್ಯಾಕೇಜ್-5	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 5 1. ಮೆಕ್‌ಗ್ರಾತ್ ರಸ್ತೆ- ಬ್ರಿಗೇಡ್ ರಸ್ತೆಯಿಂದ ರಿಚ್ಮಂಡ್ ರಸ್ತೆವರೆಗೆ	0.46	27.25	ಕಾಮಗಾರಿ ಪ್ರಗತಿಯಲ್ಲಿದೆ
11		2. ಕಾನ್ವೆಂಟ್ ರಸ್ತೆ- ರಿಚ್ಮಂಡ್ ರಸ್ತೆಯಿಂದ ರೆಸಿಡೆನ್ಸಿ ರಸ್ತೆಯವರೆಗೆ	0.422		
12		3. ಹೇಯ್ಸ್ ರಸ್ತೆ- ರಿಚ್ಮಂಡ್ ರಸ್ತೆಯಿಂದ ರೆಸಿಡೆನ್ಸಿ ರಸ್ತೆಯವರೆಗೆ	0.31		
13		4. ವುಡ್ ಸ್ಟ್ರೀಟ್- ಮ್ಯೂಸಿಯಂ ರಸ್ತೆಯಿಂದ ರಿಚ್ಮಂಡ್ ರಸ್ತೆಯವರೆಗೆ	0.28		
14		5. ಕ್ಯಾಸಲ್ ಸ್ಟ್ರೀಟ್ - ಮ್ಯೂಸಿಯಂ ರಸ್ತೆಯಿಂದ ರಿಚ್ಮಂಡ್ ರಸ್ತೆಯವರೆಗೆ	0.38		
15		6. ಟೇಟ್ ಲೇನ್ - ರಿಚ್ಮಂಡ್ ರಸ್ತೆಯಿಂದ ಕ್ಯಾಸಲ್ ಸ್ಟ್ರೀಟ್ ವರೆಗೆ	0.13		
16	ಫೇಸ್ ಎ , ಪ್ಯಾಕೇಜ್-6	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 6 1. ಕಸ್ತೂರ್ಬಾ ರಸ್ತೆ- ಸಿದ್ದಲಿಂಗಯ್ಯ ವೃತ್ತದಿಂದ ಮಿನ್ಸ್ಕ್ ಚೌಕಕ್ಕೆ ಕ್ವೀನ್ಸ್ ಪ್ರತಿಮೆ (ಎಂ ಜಿ ರಸ್ತೆ)	0.735	45.75	ಕಾಮಗಾರಿ ಪ್ರಗತಿಯಲ್ಲಿದೆ
17		2. ಕ್ವೀನ್ಸ್ ರಸ್ತೆ- ಎಂ ಜಿ ರಸ್ತೆಯಿಂದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದವರೆಗೆ	1.827		
18	ಫೇಸ್ ಎ , ಪ್ಯಾಕೇಜ್-7	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 7 1. ರಾಜಾ ರಾಮ್ ಮೋಹನ್ ರಾಯ್ ರಸ್ತೆ - ರಿಚ್ಮಂಡ್ ಸರ್ಕಲ್ ನಿಂದ ಹಡ್ಸನ್ ಸರ್ಕಲ್ ವರೆಗೆ	1	39.97	ಕಾಮಗಾರಿ ಪ್ರಗತಿಯಲ್ಲಿದೆ
19		2. ಲಾವೆಲ್ಲೆ ರಸ್ತೆ - ಎಂ.ಜಿ.ರೋಡ್‌ನಿಂದ ರಿಚ್ಮಂಡ್ ಸರ್ಕಲ್ ವರೆಗೆ	1.376		
20		3. ಬ್ರಿಗೇಡ್ ರಸ್ತೆ - ಎಂ.ಜಿ.ರೋಡ್‌ನಿಂದ ವಾರ್ ಮೆಮೊರಿಯಲ್ ಜಂಕ್ಷನ್‌ವರೆಗೆ	0.32		

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
21	ಫೇಸ್ ಬಿ , ಪ್ಯಾಕೇಜ್-1	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 1 1. ಸೇಂಟ್ ಜಾನ್ಸ್ ರಸ್ತೆ - ಕೆನ್ಸಿಂಗ್ಟನ್ ರಸ್ತೆಯಿಂದ ಸೇಂಟ್ ಜಾನ್ಸ್ ಚರ್ಚ್ ರಸ್ತೆಯವರೆಗೆ	1.1	44.29	ಕಾಮಗಾರಿ ಪ್ರಗತಿಯಲ್ಲಿದೆ
22		2. ಸೇಂಟ್ ಜಾನ್ಸ್ ಚರ್ಚ್ ರಸ್ತೆ (ಹೊಸ ಬಂಬೂ ಬಜಾರ್ ರಸ್ತೆ ಪ್ರೊಮಿನೇಡ್ ರಸ್ತೆವರೆಗೆ)	1.58		
23	ಫೇಸ್ ಬಿ , ಪ್ಯಾಕೇಜ್-2	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 2 1. ಮಿಲ್ಲರ್ಸ್ ರಸ್ತೆ ವಿಸ್ತರಣೆ (ಮಿಲ್ಲರ್ಸ್ ರಸ್ತೆ ಅಂಡರ್‌ಪಾಸ್‌ನಿಂದ ಹೈನ್ಸ್ ಸರ್ಕಲ್ ವರೆಗೆ)	1.14	43.42	ಕಾಮಗಾರಿ ಪ್ರಗತಿಯಲ್ಲಿದೆ
24		2. ಕಂಟೋನ್ಮೆಂಟ್ ರಸ್ತೆ (ಮಿಲ್ಲರ್ಸ್ ರಸ್ತೆಯಿಂದ ಕ್ವೀನ್ಸ್ ರಸ್ತೆಯವರೆಗೆ)	0.57		
25		3. ಎಚ್.ಕೆ.ಪಿ ರಸ್ತೆ (ಕ್ವೀನ್ಸ್ ರಸ್ತೆಯಿಂದ ರಸ್ಸೆಲ್ ಮಾರ್ಕೆಟ್ ವರೆಗೆ)	0.9		
26	ಫೇಸ್ ಬಿ, ಪ್ಯಾಕೇಜ್-3	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 3 1. ಜುಮ್ಮಾ ಮಸೀದಿ ರಸ್ತೆ - ಬೌರಿಂಗ್ ಆಸ್ಪತ್ರೆ ರಸ್ತೆಯಿಂದ ರಸ್ಸೆಲ್ ಮಾರ್ಕೆಟ್ ವರೆಗೆ	0.57	16.94	ಕಾಮಗಾರಿ ಪ್ರಗತಿಯಲ್ಲಿದೆ
27		2. ಚಾಂದನಿ ಚೌಕ್ ರಸ್ತೆ - ಎಚ್.ಕೆ.ಪಿ ರಸ್ತೆಯಿಂದ ಶಿವಾಜಿ ರಸ್ತೆವರೆಗೆ	0.45		
28	ಫೇಸ್ ಬಿ , ಪ್ಯಾಕೇಜ್-4	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 4 1. ಸೇತು ರಾವ್ ರಸ್ತೆ (ಮೈಸೂರು ರಸ್ತೆ ಜಂಕ್ಷನ್‌ನಿಂದ ಜಿ. ಪಿ ರಸ್ತೆವರೆಗೆ)	0.26	29.37	ಕಾಮಗಾರಿ ಪ್ರಗತಿಯಲ್ಲಿದೆ
29		2. ಸೇತು ರಾವ್ ಕ್ರಾಸ್ ರಸ್ತೆ (ಅಯ್ಯಂಗಾರ್ ರಸ್ತೆಯಿಂದ ಸೇತು ರಾವ್ ರಸ್ತೆ ಜಂಕ್ಷನ್ ವರೆಗೆ)	0.18		
30		3. ಎನ್‌ಆರ್ ರಸ್ತೆ (ಎಸ್‌ಜೆಪಿ ರಸ್ತೆ ಜಂಕ್ಷನ್‌ನಿಂದ ಕಚ್ಚೇರಿ ರಸ್ತೆ ಜಂಕ್ಷನ್‌ವರೆಗೆ)	0.48		
31		4. ಎಸ್‌ಜೆಪಿ ರಸ್ತೆ (ಕೆಆರ್ ಮಾರ್ಕೆಟ್ ವೃತ್ತದಿಂದ ಎನ್‌ಆರ್ ರಸ್ತೆ ಜಂಕ್ಷನ್‌ವರೆಗೆ)	0.81		

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
32	ಫೇಸ್ ಬಿ , ಪ್ಯಾಕೇಜ್-5	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 5 1. ರೇಸ್ ಕೋರ್ಸ್ ರಸ್ತೆ (ಪ್ಯಾಲೇಸ್ ರಸ್ತೆಯಿಂದ ಹರೇ ಕೃಷ್ಣ ರಸ್ತೆಯವರೆಗೆ)	0.66	48.92	ಕಾಮಗಾರಿ ಪ್ರಗತಿಯಲ್ಲಿದೆ
33		2. ರಾಜ್‌ಭವನ್ ರಸ್ತೆ (ಮಿಲ್ಲರ್ಸ್ ರಸ್ತೆ ಇಂಟರ್ ಸೆಕ್ಷನ್ ನಿಂದ ಅಲಿ ಅಸ್ಕರ್ ರಸ್ತೆ)	0.48		
34		3. ಪ್ಯಾಲೇಸ್ ರಸ್ತೆ (ಮಿಲ್ಲರ್ಸ್ ರಸ್ತೆ ಇಂಟರ್ ಸೆಕ್ಷನ್ ನಿಂದ ಬಸವೇಶ್ವರ	1.91		
35	ಫೇಸ್ ಬಿ , ಪ್ಯಾಕೇಜ್-6	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 6 1. ಅವೆನ್ಯೂ ರಸ್ತೆ - ಮೈಸೂರು ಬ್ಯಾಂಕ್ ವೃತ್ತದಿಂದ ಎಸ್‌ಜೆಪಿ ರಸ್ತೆವರೆಗೆ	1.02	27.30	ಕಾಮಗಾರಿ ಪ್ರಗತಿಯಲ್ಲಿದೆ
36		2. ರೀನಿಯಸ್ ಸ್ಟ್ರೀಟ್ - ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆಯಿಂದ ಲ್ಯಾಂಗ್‌ಫೋರ್ಡ್ ರಸ್ತೆಯವರೆಗೆ	0.57		
		ಒಟ್ಟು ಮೊತ್ತ	29.542	481.65	

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್.

5/12/2020

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 103 ಎಸ್‌ಎಸ್‌ಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊಠಡಿ ಸಂಖ್ಯೆ: 363ಇ, ವಿಧಾನಸೌಧ,
ಬೆಂಗಳೂರು, ದಿನಾಂಕ: 07.12.2020.

130
8/12/2020

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನಸೌಧ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಶಿವಣ್ಣ ಬಿ. (ಆನೇಕಲ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 323ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ಅ.ಸ.ಪ ಸಂಖ್ಯೆ: ವಿಸಪ್ರಶಾ/15ನೇವಿಸ/8ಅ/ಚುಗು-ಚುರ.ಪ್ರಶ್ನೆ/02/2020; ದಿನಾಂಕ: 02.12.2020

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಶಿವಣ್ಣ ಬಿ. (ಆನೇಕಲ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 323ಕ್ಕೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಮಾರುತಿ ಪ್ರಸನ್ನ ಬಿ.ವಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-7).

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 323
2. ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ. (ಆನೇಕಲ್)
3. ಉತ್ತರಿಸುವ ದಿನಾಂಕ : 08.12.2020
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಗೆಜೆಟೆಡ್ ಪ್ರೋಬೇಷನರಿ 2015ನೇಯ ಸಾಲಿನ ಅಭ್ಯರ್ಥಿಗಳ ಅಂಕಗಳನ್ನು/ ದತ್ತಾಂಶಗಳನ್ನು ಹೊರಗುತ್ತಿಗೆ ಪಡೆದಿದ್ದ ಸಾಫ್ಟ್ ವೇರ್ ಸೇವಾ ಪೂರಕೈದಾರ ಕಂಪನಿಯ (TCS ION Company) ಸರ್ವರ್ ಮತ್ತು ಡೇಟಾಬೇಸ್ (MUSQL) ನಿಂದ ಮತ್ತೊಂದು ಸಂಸ್ಥೆಯ (NIC- Center for E-governance) ಹೊಸ ಸರ್ವರ್ ಮತ್ತು ಡೇಟಾಬೇಸ್ (MUSQL) ಏಕೆ ವರ್ಗಾಹಿಸಲಾಯಿತು; (ಪೂರ್ಣ ವಿವರ ನೀಡುವುದು)	ವರ್ಗಾಯಿಸಿರುವುದಿಲ್ಲ. ಇದು ಸತ್ಯಕ್ಕೆ ದೂರವಾಗಿದ್ದು, ಯಾವುದೇ ಹುರುಳಿರುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.
ಆ)	2015 ನೇ ಸಾಲಿನ ಗೆಜೆಟೆಡ್ ಪ್ರೋಬೇಷನ್ ಅಭ್ಯರ್ಥಿಗಳಿಗೆ ಅಂಕಗಳ ಪಟ್ಟಿಯನ್ನು ಡಿಜಿಟಲ್ ಮೌಲ್ಯ ಮಾಪನ ಹೊರಗುತ್ತಿಗೆ ಪಡೆದಿದ್ದ ಸಾಫ್ಟವೇರ್ ಸೇವಾ ಪೂರಕೈದಾರ ಕಂಪನಿಯ (TCS ION Company) ಡೇಟಾಬೇಸ್ (MUSQL) ನಿಂದ ನೀಡಲು ಏಕೆ ಸಾಧ್ಯವಾಗಿಲ್ಲ; (ಪೂರ್ಣ ಮಾಹಿತಿ ನೀಡುವುದು)	ಟಿ.ಸಿ.ಎಸ್. ಸಂಸ್ಥೆಯೊಂದಿಗಿನ ಒಪ್ಪಂದ ಕೇವಲ ಅಭ್ಯರ್ಥಿಗಳ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ತಂತ್ರಾಂಶವನ್ನು ಒದಗಿಸುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.
ಇ)	ಒಂದು ನಿಗದಿತ ಪರೀಕ್ಷೆಯ ಮೌಲ್ಯ ಮಾಪನಕ್ಕೆ ನಿರ್ದಿಷ್ಟ ಪಡಿಸಿದ್ದ ಸಂಸ್ಥೆಯಿಂದ ಮೌಲ್ಯ ಮಾಪನ ಮಾಡಿಸದೇ ಬೇರೊಂದು ಸಂಸ್ಥೆಯಿಂದ ಮೌಲ್ಯ ಮಾಪನ ಮಾಡಿಸಿದರೆ ಪರೀಕ್ಷಾ ಮೌಲ್ಯ ಮಾಪನದ ಪಾವಿತ್ರ್ಯತೆಗೆ ಕುಂದು ಉಂಟಾಗುವುದಿಲ್ಲವೇ; ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? (ಪೂರ್ಣ ವಿವರ ನೀಡುವುದು)	ಆಯೋಗವು 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿ ಸಂಬಂಧ ಹೊರಡಿಸಲಾದ ದಿನಾಂಕ: 12.05.2017ರ ಅಧಿಸೂಚನೆಯಲ್ಲಿ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ (Digital Evaluation) ಮಾಡಲಾಗುವುದು ಎಂದು ಅಧಿಸೂಚಿಸಿದೆ. ಈ ಅಧಿಸೂಚನೆಯನ್ನು ದಿನಾಂಕ: 25.05.2017ರ ಕರ್ನಾಟಕ ರಾಜ್ಯ ಪತ್ರದಲ್ಲಿಯೂ ಸಹ ಪ್ರಕಟಿಸಲಾಗಿರುತ್ತದೆ. ಆಯೋಗದಿಂದ ನಿರ್ದಿಷ್ಟಪಡಿಸಿದ ಸಂಸ್ಥೆಯಾದ ಟಿ.ಸಿ.ಎಸ್. ಸಂಸ್ಥೆಯಿಂದಲೇ ಸರ್ಕಾರದಿಂದ 4ಜಿ ವಿನಾಯಿತಿ (4G Exemption) ಪಡೆದು ಮೌಲ್ಯಮಾಪನ ಮಾಡಿಸಲಾಗಿರುತ್ತದೆ. ಆದ್ದರಿಂದ ಬೇರೊಂದು ಸಂಸ್ಥೆಯಿಂದ ಮೌಲ್ಯಮಾಪನ ಮಾಡಿಸಲಾಗಿರುವುದಿಲ್ಲ. ಇದು ಸತ್ಯಕ್ಕೆ ದೂರವಾಗಿದ್ದು, ಯಾವುದೇ ಹುರುಳಿರುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.

ಸಂಖ್ಯೆ: ಸಿಆಸುಇ 103 ಎಸ್ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 679 ಬಿಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 07/12.2020

101
8/12/2020

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ/ಪರಿಷತ್
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆ/ಪರಿಷತ್ ಸದಸ್ಯರಾದ ಶ್ರೀ ನರೇಂದ್ರ ಆರ್. (ಹನೂರು) ಇವರ ಚುಕ್ಕೆಗುರುತಿನ/ಗುರುತಿಲ್ಲದ ಪ್ರ.ಸಂ.- 324 ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ಪರಿಷತ್ ಸದಸ್ಯರಾದ ಶ್ರೀ ನರೇಂದ್ರ ಆರ್. (ಹನೂರು) ಇವರ ಚುಕ್ಕೆಗುರುತಿನ/ಗುರುತಿಲ್ಲದ ಪ್ರ.ಸಂ.-324 ಕ್ಕೆ ಉತ್ತರದ ಪ್ರತಿ 25 ಗಳನ್ನು ಇದರೊಂದಿಗೆ ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಕೆ. ಅಶ್ವತ್ಥ)
ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	324
ಮಾನ್ಯ ಸದಸ್ಯರ ಹೆಸರು	ಶ್ರೀ ನರೇಂದ್ರ ಆರ್. (ಹನೂರು)
ಉತ್ತರಿಸಬೇಕಾದ ದಿನಾಂಕ	08.12.2020
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹನೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹನೂರು ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಒಕ್ಕಲಿಗರ ಭವನದ ಕಟ್ಟಡ ಕಾಮಗಾರಿಯು ಸರ್ಕಾರದ ಅನುದಾನದ ಕೊರತೆಯಿಂದಾಗಿ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ಈ ಭವನದ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಸದರಿ ಸಮುದಾಯ ಭವನಕ್ಕೆ 2017-18ನೇ ಸಾಲಿನಲ್ಲಿ ರೂ.100.00 ಲಕ್ಷಗಳ ಸಹಾಯಧನ ಮಂಜೂರಾಗಿದ್ದು, ಅದರಂತೆ ರೂ.25.00 ಲಕ್ಷಗಳನ್ನು ಮೊದಲನೇ ಕಂತಾಗಿ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಆದರೆ, ಸಮುದಾಯ ಭವನದ ಹೆಸರನ್ನು ಹನೂರು ಟೌನ್ ನಲ್ಲಿ ಒಕ್ಕಲಿಗರ ಸಮುದಾಯ ಭವನ ಎನ್ನುವ ಬದಲಾಗಿ ನಾಡಪ್ರಭು ಕೆಂಪೇಗೌಡ ಚಾರಿಟೆಬಲ್ ಟ್ರಸ್ಟ್ (ರಿ), ಹನೂರು ಟೌನ್, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಎಂದು ತಿದ್ದುಪಡಿ ಮಾಡುವಂತೆ ಮಾನ್ಯ ಶಾಸಕರು, ಹನೂರು ವಿಧಾನ ಸಭಾ ಕ್ಷೇತ್ರ ರವರು ಕೋರಿದ್ದು, ಅದರಂತೆ ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 86 ಬಿಎಂಎಸ್ 2020, ದಿನಾಂಕ:19.05.2020 ರಲ್ಲಿ ಸಂಸ್ಥೆಯ ಹೆಸರನ್ನು ತಿದ್ದುಪಡಿ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ಸಂಸ್ಥೆಗೆ ಮೊದಲನೇ ಕಂತಾಗಿ ಬಿಡುಗಡೆಯಾಗಿರುವ ಅನುದಾನ ರೂ.25.00 ಲಕ್ಷಗಳು ಜಿಲ್ಲಾಧಿಕಾರಿಗಳು,

		ಚಾಮರಾಜನಗರ ಜಿಲ್ಲೆ, ರವರ ಪಿ.ಡಿ.ಖಾತೆಯಲ್ಲಿದ್ದು, ಸರ್ಕಾರದ ತಿದ್ದುಪಡಿ ಆದೇಶದಂತೆ ಸದರಿ ಅನುದಾನವನ್ನು ಬಿಡುಗಡೆ ಮಾಡಲು ದಿನಾಂಕ:31.12.2019 ರಿಂದ 04.11.2020 ರವರೆಗೆ ಪಿ.ಡಿ ಖಾತೆಯು ಲಾಕ್ ಆಗಿದ್ದು, ಕಾರಣ ಸದರಿ ಅನುದಾನವನ್ನು ಖಜಾನೆಯಿಂದ ಡ್ರಾ ಮಾಡಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಪಿ.ಡಿ.ಖಾತೆಯಿಂದ ಅನುದಾನವನ್ನು ಡ್ರಾ ಮಾಡಲು ಅನುಮತಿ ನೀಡಿದ್ದು, ಸರ್ಕಾರದ ತಿದ್ದುಪಡಿ ಆದೇಶದನ್ವಯ ಸದರಿ ಕಾಮಗಾರಿಗೆ ಸಹಾಯಧನವನ್ನು ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗಿದೆ.

ಸಂಖ್ಯೆ:ಹಿಂವಕ 679 ಬಿಎಂಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ
ಬೆಂಗಳೂರು –560001. ದೂ. 22034319

ಸಂಖ್ಯೆ: ಸಿಐ 123 ಸಪ್ರಕೈ 2020

ದಿನಾಂಕ: 08.12.2020

54
U/S
08/12/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ. & ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು–01.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನಸೌಧ, ಬೆಂಗಳೂರು–01.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 326 ಕ್ಕೆ ಉತ್ತರಿಸುವ ಬಗ್ಗೆ.

* * * * *

ಮಾನ್ಯ ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 326ಕ್ಕೆ ದಿನಾಂಕ:08.12.2020 ರಂದು ವಿಧಾನ ಸಭೆಯಲ್ಲಿ ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಯ ಉತ್ತರಗಳ 25 ಮುದ್ರಿತ ಪ್ರತಿಗಳು ಹಾಗೂ 5 ಸಿಡಿಗಳನ್ನು ಈ ಪತ್ರದೊಂದಿಗೆ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Sumathi
8.12.2020
(ಸುಮತಿ ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸಪ್ರಕೈ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಮುಖ್ಯಮಂತ್ರಿಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು–01.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, (ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು–01.

ಕರ್ನಾಟಕ ವಿಧಾನಸಭೆ

ವಿಧಾನ ಸಭಾ ಸದಸ್ಯರ ಹೆಸರು	:	ಶ್ರೀದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಪ್ರಶ್ನೆ ಸಂಖ್ಯೆ	:	326
ಉತ್ತರಿಸಬೇಕಾದ ದಿನಾಂಕ	:	08.12.2020
ಉತ್ತರಿಸಬೇಕಾದ ಸಚಿವರು	:	ಮುಖ್ಯಮಂತ್ರಿಗಳು
ವಿಷಯ	:	ಸಣ್ಣ ಕೈಗಾರಿಕಾ ಘಟಕಗಳು

ಸಂ	ಪ್ರಶ್ನೆ	ಉತ್ತರ
ಅ	ಕಿತ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಹಾಲಿ ಇರುವಂತಹ ಸಣ್ಣ ಕೈಗಾರಿಕಾ ಘಟಕಗಳಾವುವು (ಹೋಬಳಿವಾರು ವಿವರ ನೀಡುವುದು)	ಕಿತ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ನೋಂದಾಯಿಸಲಾಗಿರುವ ಸಣ್ಣ ಕೈಗಾರಿಕಾ ಘಟಕಗಳ ಮಾಹಿತಿಯನ್ನು ಅನುಬಂಧ-ಅ ರಲ್ಲಿ ಲಗತ್ತಿಸಿದೆ.
ಆ	ಈ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಇರುವಂತಹ ಆದ್ಯತಾ ವಲಯಗಳಾವುವು (ವಿವರ ನೀಡುವುದು)	ಕಿತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಇರುವಂತಹ ಆದ್ಯತಾ ವಲಯಗಳು: • ಹಾಲು ಉತ್ಪನ್ನಗಳು, • ಪಶು ಮತ್ತು ಕೋಳಿ ಆಹಾರ • ಜವಳಿ ಆಧಾರಿತ ಸಿದ್ದ ಉಡುಪು ತಯಾರಿಕೆ, ಬಟ್ಟೆ ತಯಾರಿಕೆ, ಸೀರೆ ತಯಾರಿಕೆ • ಕೃಷಿ ಆಧಾರಿತ ಹಾಗೂ ಆಹಾರ ಸಂಸ್ಕರಣಾ ವಲಯಗಳು • ಬಂಬೂ ಆಧಾರಿತ / ಕಟ್ಟಿಗೆ ಆಧಾರಿತ ಕೈಗಾರಿಕೆ ವಲಯ • ಖನಿಜ ಆಧಾರಿತ ಸ್ಟೋನ್ ಜಲ್ಲಿ & ಎಮ್. ಸ್ಯಾಂಡ • ಇಂಜಿನಿಯರಿಂಗ್ ಆಧಾರಿತ ಫ್ಯಾಬ್ರಿಕೇಶನ / ಅಟೋ ರಿಪೇರಿ / ಅಟೋ ಬಾಡಿ ಬಿಲ್ಡಿಂಗ್ ಇತ್ಯಾದಿ
ಇ	ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಸರ್ಕಾರ ಕೈಗೊಂಡ ಕ್ರಮಗಳಾವುವು?	ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗವಕಾಶಗಳನ್ನು ಸೃಜಿಸಲು ಸರ್ಕಾರವು ಹೊಸ ಕೈಗಾರಿಕಾ ನೀತಿ 2020-25 ನ್ನು ಜಾರಿಗೊಳಿಸಿದೆ. ಸದರಿ ಕೈಗಾರಿಕಾ ನೀತಿಯನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಕಿತ್ತೂರ ವಿಧಾನ ಸಭಾ ಕ್ಷೇತ್ರವನ್ನು ಸದರಿ ಕೈಗಾರಿಕಾ ನೀತಿಯಲ್ಲಿ ವಲಯ-1 ರಲ್ಲಿ ಪರಿಗಣಿಸಲಾಗಿದೆ. ಅತೀ ಸಣ್ಣ / ಸಣ್ಣ / ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದಿಮೆದಾರರಿಗೆ ಶೇ. 30 ರಷ್ಟು ಬಂಡವಾಳ ಹೂಡಿಕೆ ಸಹಾಯಧನ, ಶೇ. 100 ರಷ್ಟು ಮುಂದ್ರಾಕ ಶುಲ್ಕ ವಿನಾಯಿತಿ ಹಾಗೂ ನೊಂದಣಿ ಶುಲ್ಕ ರಿಯಾಯಿತಿ, ಶೇ. 100 ರಷ್ಟು ವಿದ್ಯುತ್ ತೆರಿಗೆ ವಿನಾಯಿತಿ (ಮೊದಲ 7ವರ್ಷದ ವರೆಗೆ), ಪ್ರತಿ ಯುನಿಟಿಗೆ 1/- ರೂ. ವಿದ್ಯುತ್ ಬಿಲ್ಲಿನಲ್ಲಿ ವಿನಾಯಿತಿ (ಮೊದಲು 3 ವರ್ಷದವರೆಗೆ), ಶೇ 5 ರಂತೆ ಬಡ್ಡಿ ಸಹಾಯಧನ (ಮೊದಲ 6 ವರ್ಷದವರೆಗೆ) ಇತ್ಯಾದಿ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ಸಂ	ಪ್ರಶ್ನೆ	ಉತ್ತರ
		ಇದಲ್ಲದೆ, **ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನಯೋಜನೆಯಡಿ** ನಗರ ಮತ್ತುಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆಗರಿಷ್ಠ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.
ಈ	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆ ಸ್ಥಾಪಿಸಲು ಸರ್ಕಾರದ ಕ್ರಮವೇನು?	ಕಿತ್ತೂರು ವಿಧಾನ ಸಭಾ ಕ್ಷೇತ್ರದ ಕಿತ್ತೂರಿನಲ್ಲಿ ಒಟ್ಟು 433.18 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಅಭಿವೃದ್ಧಿ ಪಡಿಸಲಾಗಿದ್ದು, ಉದ್ದಿಮೆದಾರರಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಅದರಂತೆ ಇಲ್ಲಿಯವರೆಗೆ 108 ಉದ್ದಿಮೆದಾರರಿಗೆ 58 ಎಕರೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಸದರಿ ನಿವೇಶನಗಳಲ್ಲಿ ಉದ್ದಿಮೆದಾರರು ತಮ್ಮ ಉದ್ದಿಮೆಗಳನ್ನು ಸ್ಥಾಪಿಸಲು ಕ್ರಮವಹಿಸುತ್ತಿದ್ದಾರೆ.

ಸಿಐ 123 ಸಪ್ರಕೈ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ, ಮಾನ್ಯ ವಿಧಾನಸಭಾ ಸದಸ್ಯರು, ಕಿತ್ತೂರು ವಿಧಾನಸಭಾ ಕ್ಷೇತ್ರ ಇವರ ಪ್ರಶ್ನೆ ಸಂ.326 ಕ್ಕೆ ಅನುಬಂಧ-1

#	EnterpriseName	Address	OwnerName	Activity
1	SIDARAYA VASUDEV BHANDARI	DOMBARKOPPA,POST:KITTUR TAL:BAILHONGAL,DIST:BELAGAVI.	SIDARAYA VASUDEV BHANDARI	Weaving, manufacturing of man-made fiber and man-made mixture fabrics.
2	ANANYA FOOD AND BEVERAGES	AT: SR NO 149/9B KURAGUND (V) BAILHONGAL (TQ) TQ: BAILHONGAL DIST: BELGAUM	Veeranna Hunashimarad	Manufacture of mineral water
3	VEHICLE SERVICE CENTRE	KUTUBUDDIN HUSENSAB SHAYANNAVAR R/O TIGADI TQ BAILAHONGAL DIST BELGAUM	KUTUBUDDIN SHAYANNAVAR	Other professional, scientific and technical activities n.e.c.
4	SUNAGAR TAILORING WORKS	AT: BEVINKOPPA, POST : AMTUR TQ: BAILHONGAL	PUNDALIK NAGAPPA SUNAGAR	Manufacture of other knitted and crocheted apparel including hosiery
5	YALLAPPA TEXTILES	H NO 543 VALMIKI GALLI DESHNUR BAILHONGAL BELAGAVI	YALLAPPA HOLEPPAGOL	Weaving, manufacture of cotton and cotton mixture fabrics.
6	NINGAVVA JULY	H. NO. 108, KARAVINAKOPPA ROAD, BAILHONGAL, DIST. : BELAGAVI	NINGAVVA JULY	Other
7	ARMAAN ENTERPRISES	#01-21, HANUMANTHA DEVARA ONI, SIDDASAMUDRA, BAILHONGALA	Shabanabegam Mulla	Other
8	CHANDAN MICRO ENTERPRISES	#32, SIDDA SAMUDRA, BAILAHONGALA BELAVADI, BELAGAVI-591104	Basappa Haadimani	Other
9	KAMADENU DAIRY FORM	#101, HUDEDA GALLI, BAILAHONGAL, 591104, BELVADI.	Maktumhusen Mammadsab Rajebai	Dairy
